# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಸೋಮವಾರ, ಮೇ 03, 2021

ಸಂಪುಟ : 47 ಸಂಚಿಕೆ : 363 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಬೆಳಗಾವಿ : ಬಿಜೆಪಿಗೆ ಕಠಿಣ ಜಯ

### ✦ ಮಸ್ಕಿಯಲ್ಲಿ ಹಸ್ತ ✦ ಬಸವಕಲ್ಯಾಣದಲ್ಲಿ ಕಮಲ



ಬೆಂಗಳೂರು, ಮೇ 2 - ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಏದುಸಿರು ಬಿಡುತ್ತಾ ಗೆಲುವು ದಾಖಲಿಸಿರುವ ಬಿಜೆಪಿ, ಬಸವಕಲ್ಯಾಣದಲ್ಲೂ ಗೆಲುವು ದಾಖಲಿಸಿದೆ. ಮಸ್ಕಿಯಲ್ಲಿ ಕಾಂಗ್ರೆಸ್ ಭಾರೀ ಜಯ ಕಂಡಿದೆ.

ಕೇಂದ್ರ ಸಚಿವರಾಗಿದ್ದ ಸುರೇಶ್ ಅಂಗಡಿ ನಿಧನದಿಂದ ತೆರವಾಗಿದ್ದ ಬೆಳಗಾವಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಅವರ ಪತ್ನಿ ಮಂಗಳ, 5,240 ಮತಗಳ ಅಂತರದಿಂದ ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಸತೀಶ್ ಜಾರಕಿಹೊಳಿ ಅವರನ್ನು ಪರಾಭವಗೊಳಿಸಿದ್ದಾರೆ.

ಮಂಗಳ ಅವರು 4,40,327 ಮತಗಳನ್ನು ಪಡೆದಿದ್ದರೆ, ಜಾರಕಿಹೊಳಿ 4,35,087 ಮತ ಪಡೆದಿದ್ದಾರೆ.

ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಶಿವಸೇನೆ ಬೆಂಬಲ ಪಡೆದಿದ್ದ ಸ್ವತಂತ್ರ ಅಭ್ಯರ್ಥಿ ಶುಭನ್ ವಿಕ್ರಾಂತ್ ಶೆಲ್ಕೆ ಅವರು 1,17,174 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಕಳೆದ ಬಾರಿ ಬಿಜೆಪಿ ಈ ಕ್ಷೇತ್ರದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿತ್ತು. ಆದರೆ, ಈ ಬಾರಿ ಪ್ರತಿ ಸುತ್ತಿನಲ್ಲೂ ಮುನ್ನಡೆ ಪಕ್ಷದಿಂದ (2ನೇ ಪುಟಕ್ಕೆ)

## ಮೋದಿಗಿಂತ ದೀದಿಯೇ ಇರಲಿ

### ಮಮತೆ ಬಿಡದ ಬಂಗಾಳ, ಕೇರಳದಲ್ಲಿ ಎಡರಂಗದ ದಾಖಲೆ



ನವದೆಹಲಿ, ಮೇ 2 - ನಾಲ್ಕು ರಾಜ್ಯಗಳ ವಿಧಾನಸಭೆಗಳಿಗೆ ನಡೆದ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಬಿಜೆಪಿಯ ಅಬ್ಬರದ ಪ್ರಚಾರವನ್ನು ಮೆಟ್ಟಿ ನಿಂತು ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳದ ಗದ್ದುಗೆ ಉಳಿಸಿಕೊಂಡಿದ್ದಾರೆ. ಕೇರಳದಲ್ಲಿ ಎಡರಂಗ ಸರ್ಕಾರವನ್ನು ಪಿಣರಾಯಿ ವಿಜಯನ್ ದಡ ಸೇರಿಸಿದ್ದಾರಾದರೂ, ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆಗೆ ಎಐಎಡಿಎಂಕೆ ಸರ್ಕಾರ ಪತನಗೊಂಡಿದೆ.

ಅಸ್ಸಾಂನಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ಕೇಂದ್ರಾಡಳಿತ ಪ್ರದೇಶವಾದ ಪುದುಚೆರಿಯಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಚುನಾವಣೆ ನಡೆಯುವ ವೇಳೆಗೆ ಕೊರೊನಾದ ಎರಡನೇ ಅಲೆ ಇಡೀ ದೇಶಕ್ಕೆ ಆಘಾತ ನೀಡಿತ್ತು. ಈ ನಡುವೆಯೇ ನಡೆದ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣಾ ಸಮರ ಇಡೀ ದೇಶದ ಗಮನ ಸೆಳೆದಿತ್ತು.

ಮೋದಿಗಿಂತ ದೀದಿಯೇ (ಮಮತಾ ಬ್ಯಾನರ್ಜಿ) ಇರಲಿ ಎಂದು ಮುಖ್ಯಮಂತ್ರಿ ಮಮತಾಗೆ ಜಯಮಾಲೆ ಹಾಕಿರುವ ರಾಜ್ಯದ ಜನತೆ, ಮೂರನೇ ಎರಡರ ಭರ್ಜರಿ ಬಹುಮತ ನೀಡಿದ್ದಾರೆ. 292 ಕ್ಷೇತ್ರಗಳ ರಾಜ್ಯದಲ್ಲಿ ಮೊದಲ ಬಾರಿಗೆ ತೃಣಮೂಲ ಕಾಂಗ್ರೆಸ್ 200ಕ್ಕೂ ಹೆಚ್ಚು ಸ್ಥಾನ ಪಡೆದುಕೊಂಡಿದೆ. ಬಿಜೆಪಿ ದೂರದ ಎರಡನೇ ಸ್ಥಾನದಲ್ಲಿದೆ.

ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಖಾತೆ ತೆರೆಯಲೂ ವಿಫಲವಾಗಿವೆ. ಒಂದು ಕಾಲದಲ್ಲಿ ತನ್ನ (3ನೇ ಪುಟಕ್ಕೆ)

### ಪಕ್ಷ ಗೆಲ್ಲಿಸಿದರೂ ಮಮತಾಗೆ ಸೋಲು

ಕೊಲ್ಕೊತಾ, ಮೇ 2 - ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಕ್ಷವನ್ನು ಗೆಲ್ಲಿಸಿದ್ದಾರಾದರೂ, ತಾವೇ ನಂದಿಗ್ರಾಮದಲ್ಲಿ ಪರಾಭವ ಕಂಡಿದ್ದಾರೆ.

ಒಂದು ಕಾಲದಲ್ಲಿ ಮಮತಾರ ನಿಕಟವರ್ತಿಯಾಗಿದ್ದ ಸುವೇಂದು ಅಧಿಕಾರಿ, ಈ ಚುನಾವಣೆಗೆ ಮುಂಚೆ ತೃಣ ಮೂಲ ಕಾಂಗ್ರೆಸ್‌ನಿಂದ ಸಿಡಿದೆದ್ದು ಬಿಜೆಪಿಗೆ ಸೇರಿದ್ದರು.

ಇದರಿಂದ ಅಸಮಾಧಾನಗೊಂಡಿದ್ದ ಮಮತಾ, ಸುವೇಂದು ಅವರ ಕ್ಷೇತ್ರದಲ್ಲೇ ಸ್ಪರ್ಧೆ ನಡೆಸಿದ್ದರು. ತುರುಸಿನ ಸ್ಪರ್ಧೆಯಲ್ಲಿ (3ನೇ ಪುಟಕ್ಕೆ)

### ಪಂಚ ರಾಜ್ಯಗಳ ಪಕ್ಷಗಳ ಸಂಖ್ಯಾಬಲ

**ಪಶ್ಚಿಮ ಬಂಗಾಳ (292)**
- ✦ ತೃಣಮೂಲ ಕಾಂಗ್ರೆಸ್ - 213
- ✦ ಬಿಜೆಪಿ - 77 ✦ ಇತರೆ - 2

**ತಮಿಳುನಾಡು (234)**
- ✦ ಡಿಎಂಕೆ ಮೈತ್ರಿ - 151
- ✦ ಎಐಎಡಿಎಂಕೆ ಮೈತ್ರಿ - 78
- ✦ ಇತರೆ - 5

**ಕೇರಳ (140)**
- ✦ ಎಲ್‌ಡಿಎಫ್ - 92
- ✦ ಯುಡಿಎಫ್ - 39 ✦ ಇತರೆ - 9

**ಅಸ್ಸಾಂ (126)**
- ✦ ಎನ್‌ಡಿಎ - 75
- ✦ ಯುಪಿಎ - 50 ✦ ಇತರೆ - 1

**ಪುದುಚೆರಿ (30)**
- ✦ ಎನ್‌ಡಿಎ - 16
- ✦ ಯುಪಿಎ - 8 ✦ ಇತರೆ - 6


MANIS DATA LINK

BSNL

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

3300 GB

60 Mbps

Super Speed Inter Net
24 Hrs. Unlimited free Calling on (Local + STD) to Any Network, FTTH Plan

Starting Plan

Rs.599/-

Instalation Free

PH: 08192 295900


## ಕೇರಳದಲ್ಲಿ ಖಾತೆ ತೆರೆಯದ ಕಮಲ

ತಿರುವನಂತಪುರಂ, ಮೇ 2 - ಕೇರಳದಲ್ಲಿ ಕನಿಷ್ಠ 35 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಗುರಿಯೊಂದಿಗೆ ಕಣಕ್ಕೆ ಧುಮುಕಿದ್ದ ಬಿಜೆಪಿ, ಎಲ್ಲ ಕ್ಷೇತ್ರಗಳಲ್ಲಿ ಸೋಲು ಕಂಡಿದೆ. ಪಕ್ಷದ ಪ್ರಮುಖ ಅಭ್ಯರ್ಥಿಗಳಾದ ಇ. ಶ್ರೀಧರನ್ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಕೆ. (2ನೇ ಪುಟಕ್ಕೆ)

### ನಿರ್ಬಂಧದ ಮಧ್ಯೆಯೂ ತರಕಾರಿ ಮಾರುಕಟ್ಟೆಯಲ್ಲಿ ಸಂತೆ

## ಬೆಳ್ಳಂಬೆಳಿಗ್ಗೆ ಬಂದ್ ಮಾಡಿಸಿದ ತಹಸೀಲ್ದಾರ್



ದಾವಣಗೆರೆ, ಮೇ 2- ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಂತೆ, ಮಾರುಕಟ್ಟೆಗಳಿಗೆ ನಿರ್ಬಂಧ ಹಾಕಿದೆ. ಇದನ್ನು ಗಣನೆಗೆ ತೆಗೆದುಕೊಳ್ಳದೇ ಇಂದು ನಗರದ ತರಕಾರಿ ಮಾರುಕಟ್ಟೆಯಲ್ಲಿ ಸಂತೆ ನಡೆಸಲಾಗುತ್ತಿತ್ತು. ತರಕಾರಿ, ದಿನಸಿ ಸೇರಿದಂತೆ ಇನ್ನಿತರೆ ಸಾಮಗ್ರಿಗಳನ್ನು ಖರೀದಿಸಲು ಜನ ಮುಗಿ ಬಿದ್ದಿದ್ದರು.

ಈ ಬಗ್ಗೆ ಮಾಹಿತಿ ಪಡೆದ ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರು (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 317 ಸೋಂಕು ದೃಢ

ದಾವಣಗೆರೆ, ಮೇ 2 - ಜಿಲ್ಲೆಯಲ್ಲಿ ಭಾನುವಾರ 317 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ ಇಬ್ಬರು ಸಾವನ್ನಪ್ಪಿದ್ದಾರೆ.

264 ಸೋಂಕಿತರು ಇದೇ ದಿನ ಗುಣ ಹೊಂದಿ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,148ಕ್ಕೆ ತಲುಪಿದೆ.

ಭಾನುವಾರ ದಾವಣಗೆರೆಯಲ್ಲಿ ಅತಿ ಹೆಚ್ಚಿನ 209 ಸೋಂಕಿತರು ಪತ್ತೆಯಾಗಿದ್ದಾರೆ. (3ನೇ ಪುಟಕ್ಕೆ)

## ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ - ಬಿಜೆಪಿ ಸಮಬಲ

ನವದೆಹಲಿ, ಮೇ 2 - ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆ ಕಂಡಿದ್ದರೂ ಸಹ, ಉಪ ಚುನಾವಣೆಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಸಮಬಲ ಪ್ರದರ್ಶಿಸಿವೆ.

ಆಂಧ್ರ ಪ್ರದೇಶ, ಕರ್ನಾಟಕ, ಕೇರಳ ಹಾಗೂ ತಮಿಳುನಾಡುಗಳ ನಾಲ್ಕು ಲೋಕಸಭಾ ಹಾಗೂ ಹತ್ತು ರಾಜ್ಯಗಳ 12 ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆದಿತ್ತು.

ಬಿಜೆಪಿ ಐದು ವಿಧಾನಸಭಾ ಕ್ಷೇತ್ರ ಹಾಗೂ ಕಾಂಗ್ರೆಸ್ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ. ಟಿ.ಆರ್.ಎಸ್., ಜೆಎಂಎಂ ಹಾಗೂ ಜೋರಮ್ ಪೀಪಲ್ಸ್ ಮೂವ್‌ಮೆಂಟ್‌ಗಳು ತಲಾ ಒಂದರಲ್ಲಿ ಗೆಲುವು ಸಾಧಿಸಿವೆ. ಆದರೆ, ಈ ಫಲಿತಾಂಶಗಳು ಯಾವುದೇ ರಾಜ್ಯಗಳ ಸರ್ಕಾರದ ಮೇಲೆ (4ನೇ ಪುಟಕ್ಕೆ)


## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

ಹರಿಹರ ತಾ॥ ನಂದಿಗಾವಿ ಗ್ರಾಮದ ವಾಸಿ ದಾವಣಗೆರೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ

**ಶ್ರೀ ಎ. ಗೋವಿಂದರೆಡ್ಡಿ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 23-04-2021ನೇ ಶುಕ್ರವಾರ ಸಂಜೆ 5.20ಕ್ಕೆ ನನ್ನ ಧರ್ಮಪತ್ನಿ

**ಶ್ರೀಮತಿ ಸುಧಾ ಗೋವಿಂದರೆಡ್ಡಿ**

ಸಂಸ್ಥಾಪಕ ಅಧ್ಯಕ್ಷರು, ನಂದಿನಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ, ನಂದಿಗಾವಿ

ಇವರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಆತ್ಮಶಾಂತಿಗಾಗಿ

**ವೈಕುಂಠ ಸಮಾರಾಧನೆಯನ್ನು**

**ದಿನಾಂಕ 03-05-2021ನೇ ಸೋಮವಾರ ಮಧ್ಯಾಹ್ನ 12.15ಕ್ಕೆ**

**ಹರಿಹರ ತಾಲ್ಲೂಕು, ನಂದಿಗಾವಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ**

ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :**

- ✦ ಶ್ರೀ ಎ. ಗೋವಿಂದರೆಡ್ಡಿ, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ದಾವಣಗೆರೆ.
- ✦ ಶ್ರೀಮತಿ ನಾಗರತ್ನಮ್ಮ, ದಿ॥ ಡಾ॥ ಆರ್.ಟಿ ಕೃಷ್ಣರೆಡ್ಡಿ ಮತ್ತು ಮಕ್ಕಳು
- ✦ ಶ್ರೀಮತಿ ಪವಿತ್ರ, ಶ್ರೀ ವಿಕಾಸ್ ಎ.ಜಿ. ಮತ್ತು ಮಕ್ಕಳು
- ✦ ಡಾ॥ ಅರ್ಪಣಾ, ಶ್ರೀಧರ್ ಈದಲ ಮತ್ತು ಮಕ್ಕಳು, (ಯು.ಎಸ್.ಎ.)
- ✦ ಡಾ॥ ಸ್ಮಿತಾ, ಡಾ॥ ವಿವೇಕ್ ಮತ್ತು ಮಕ್ಕಳು, (ಆಸ್ಟ್ರೇಲಿಯಾ)
- ✦ ಶ್ರೀಮತಿ ಅಕ್ಷತ, ಶ್ರೀ ಪ್ರಶಾಂತ್ ವಂಕಲಪಾಟಿ ಮತ್ತು ಮಕ್ಕಳು, (ಯು.ಎಸ್.ಎ.)
- ✦ ಶ್ರೀಮತಿ ಮಾನಸ, ಶ್ರೀ ವಿಶಾಲ್ ಎ.ಜಿ. ಮತ್ತು ಮಕ್ಕಳು, (ಯು.ಎಸ್.ಎ.)
- ✦ ನಂದಿಗಾವಿ ಅಕ್ಕೇರ ವಂಶಸ್ಥರು ಮತ್ತು ಹೊಸವೀರಾಪುರದ ದೊಡ್ಡಯಂಕಣ್ಣನವರ ವಂಶಸ್ಥರು, ಬಂಧು-ಮಿತ್ರರು ಹಾಗೂ ನಂದಿಗಾವಿ ಗ್ರಾಮಸ್ಥರು

ಮೊ. : 9482073102, 9901455040



'ಪಚ್ಚಿ, ನಿನ್ನ ಗಂಡನೆಂಬ ಹೆಮ್ಮೆಯ ಋಣವೇ ನನ್ನದು'

**ಶ್ರೀಮತಿ ಸುಧಾ ಗೋವಿಂದರೆಡ್ಡಿ**

ಸಂಸ್ಥಾಪಕ ಅಧ್ಯಕ್ಷರು, ನಂದಿನಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ, ನಂದಿಗಾವಿ.

ಜನನ : 18-12-1958 ಮರಣ : 23-04-2021

# ಕೂಡ್ಲಿಗಿ : ಕೋವಿಡ್ ಬೆಡ್ 21 ರಿಂದ 32 ಕ್ಕೆ ಹೆಚ್ಚಳ




ಕೂಡ್ಲಿಗಿ, ಮೇ 2- ತಾಲ್ಲೂಕಿನಲ್ಲಿ ಕೋವಿಡ್ ಪಾಸಿಟಿವ್ ವರದಿ ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಮುಂಜಾಗ್ರತೆಯಾಗಿ ಕೋವಿಡ್ ಬೆಡ್‌ಗಳನ್ನು 21 ರಿಂದ 32ಕ್ಕೆ ಹೆಚ್ಚಿಸಲಾಗಿದೆ.ಆಕ್ಸಿಜನ್ ತೊಂದರೆಯಾಗದಂತೆ ಕೂಡ್ಲಿಗಿ ಆಸ್ಪತ್ರೆ ಆವರಣದಲ್ಲಿ ಸ್ಥಳ ಪರಿಶೀಲನೆ ಮಾಡಿದ್ದು, ಸದ್ಯದಲ್ಲೇ ಆಕ್ಸಿಜನ್ ಯುನಿಟ್ ತಯಾರಿಕಾ ಘಟಕ ಸಹ ಪ್ರಾರಂಭವಾಗಲಿದೆ ಎಂದು ಆಡಳಿತ ವೈದ್ಯಾಧಿಕಾರಿ ಡಾ.ವಿನಯ್ ತಿಳಿಸಿದರು.

ಅವರು ಭಾನುವಾರ ಪತ್ರಿಕೆಯೊಂದಿಗೆ ಮಾತನಾಡುತ್ತಾ, ಈ ಹಿಂದೆ 21 ಕೋವಿಡ್ ಬೆಡ್ ನಿರ್ಮಿಸಲಾಗಿತ್ತು. ಎರಡನೇ ಅಲೆ ಜೋರಾಗುತ್ತಿರುವ ಪರಿಣಾಮವಾಗಿ ಶಾಸಕ ಎನ್.ವೈ. ಗೋಪಾಲಕೃಷ್ಣ, ತಹಸೀಲ್ದಾರ್ ಮಹಾಬಲೇಶ್ವರ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳ ಕಾಳಜಿಯಿಂದ ಕೋವಿಡ್ ಬೆಡ್‌ಗಳನ್ನು ಹೆಚ್ಚಿಸಲಾಗಿದೆ ಎಂದರು.

ತಾಲ್ಲೂಕಿನ ಕೊರೊನಾ ರೋಗಿಗಳಿಗೆ ತೊಂದರೆಯಾಗದಂತೆ ಈ ಹಿಂದೆ ಇದ್ದ ಜನರಲ್ ರೋಗಿಗಳಿಗೆ ಬಳಸಲಾಗುತ್ತಿದ್ದ ವಾರ್ಡನ್ನು ಕೋವಿಡ್ ವಾರ್ಡ್‌ಗೆ ಬಳಸಿಕೊಂಡು ಮೇಲ್ಮಹಡಿಯಲ್ಲಿ ಜನರಲ್ ವಾರ್ಡ್ ತೆಗೆದಿರುವುದಾಗಿ ತಿಳಿಸಿದರು.

ಕೋವಿಡ್ ವಾರ್ಡ್‌ನ 32 ನಾರ್ಮಲ್ ಬೆಡ್‌ನಲ್ಲಿ 7 ಐಸಿಯು, 6 ವೆಂಟಿಲೇಟರ್ ಬೆಡ್‌ಗಳಿವೆ, ಕೂಡ್ಲಿಗಿ ಆಸ್ಪತ್ರೆಯ ಕೋವಿಡ್ ವಾರ್ಡಿನಲ್ಲಿ ಈಗ 26 ಪಾಸಿಟಿವ್ ಪ್ರಕರಣಗಳಿದ್ದು, ಅದರಲ್ಲಿ 12 ಕೋವಿಡ್ ರೋಗಿಗಳು ಆಕ್ಸಿಜನ್ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಈ ಸಂಬಂಧವಾಗಿ ಆಸ್ಪತ್ರೆಗೆ ಹೆಚ್ಚುವರಿ ಸಿಬ್ಬಂದಿ ಅವಶ್ಯಕವಾಗಿದ್ದು, ಸದ್ಯದಲ್ಲೇ ಈ ಸಿಬ್ಬಂದಿ ನೇಮಕದ ಬಗ್ಗೆ ತಾಲ್ಲೂಕು ಆಡಳಿತ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

**ಸದ್ಯದಲ್ಲೇ ಕೂಡ್ಲಿಗಿ ಆಸ್ಪತ್ರೆಯಲ್ಲಿ ಆಕ್ಸಿಜನ್ ತಯಾರಿಕಾ ಘಟಕ ಸ್ಥಾಪನೆ :** ಕೊರೊನಾ ಪೀಡಿತರು ಉಸಿರಾಟದ ತೊಂದರೆಯಿಂದ ಬಳಲಿ ಪ್ರಾಣ ಹೋಗಬಾರದೆಂಬ ನಿಟ್ಟಿನಲ್ಲಿ ಶಾಸಕರು ಮತ್ತು ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ಮನಗಂಡು ಈಗಾಗಲೇ ಕೂಡ್ಲಿಗಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದು, ಸದ್ಯದಲ್ಲೇ ಆಕ್ಸಿಜನ್ ತಯಾರಿಕಾ ಘಟಕ ಸ್ಥಾಪನೆಯಾಗಲಿದ್ದು, ಯಾವ ರೋಗಿಯೂ ಉಸಿರಾಟದ ತೊಂದರೆಯಿಂದ ಬಳಲದಂತೆ ಪ್ರಾಣ ರಕ್ಷಣೆ ಮಾಡುವಲ್ಲಿ ತುಂಬಾ ಅನುಕೂಲವಾಗಲಿದೆ ಎಂದು ಡಾ.ವಿನಯ್ ಹೇಳಿದರು.

# ಹರಪನಹಳ್ಳಿ : ತುರ್ತು ಸೇವೆಗಾಗಿ 112ಕ್ಕೆ ಕರೆ ಮಾಡಿ




ಹರಪನಹಳ್ಳಿ, ಮೇ 2- ತುರ್ತು ಸೇವೆಗಾಗಿ ತಮ್ಮಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು 112ಕ್ಕೆ ಇ.ಆರ್.ಎಸ್.ಎಸ್.ಗೆ ಕರೆ ಮಾಡಿ ಎಂದು ಡಿವೈಎಸ್ಪಿ ಹಾಲುಮೂರ್ತಿರಾವ್ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯ ಮುಂಭಾಗದಲ್ಲಿ 112 ಇ.ಆರ್.ಎಸ್.ಎಸ್ ಎಮರ್ಜೆನ್ಸಿ ರೆಸ್ಪಾನ್ಸ್ ಸಪೋರ್ಟ್ ಸಿಸ್ಟಂ ವಾಹನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಾಂಕೇತಿಕವಾಗಿ ಚಾಲನೆ ನೀಡಿ ಮಾತನಾಡಿ, ಸಾರ್ವಜನಿಕರು ಅಪಘಾತ, ಕೊಲೆ, ದರೋಡೆ, ಕಳ್ಳತನ, ಸುಲಿಗೆ, ಸರಗಳ್ಳತನ, ಜಗಳ, ಮಹಿಳಾ, ಮಕ್ಕಳ, ಹಿರಿಯ ನಾಗರಿಕರ ಹಾಗೂ ಇನ್ನಿತರೆ ತುರ್ತು ಸ್ಪಂದನ ಸಹಾಯ ವ್ಯವಸ್ಥೆಗೆ 112 ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದಾಗಿದೆ ಎಂದರು.

ಸಿಪಿಐ ನಾಗರಾಜ್ ಕಮ್ಮಾರ ಮಾತನಾಡಿ, ಪೊಲೀಸ್, ಅಗ್ನಿಶಾಮಕ ದಳ, ಆಂಬ್ಯುಲೆನ್ಸ್ ನೆರವು ಸೇರಿದಂತೆ ಯಾವುದೇ ತುರ್ತು ಸಂದರ್ಭ ದಲ್ಲಿ ನೂತನವಾದ 112 ಸಹಾಯವಾಣಿಗೆ ಕರೆ ಮಾಡಿದರೆ ತುರ್ತಾಗಿ ಆ ಸ್ಥಳಕ್ಕೆ ಧಾವಿಸಿ ರಕ್ಷಣೆ ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪಿಎಸ್‌ಐ ಪ್ರಕಾಶ್ ಮಾತನಾಡಿ, ತುರ್ತು ಸ್ಪಂದನೆಗೆ 112ಕ್ಕೆ ಕರೆ ಮಾಡಿ ಸಾರ್ವಜನಿಕರು ಟೋಲ್ ಫ್ರೀ ಸಂಖ್ಯೆ 100ರ ಬದಲು 112ಕ್ಕೆ ಕರೆ ಮಾಡಿದಲ್ಲಿ ಅವಶ್ಯಕತೆ ಇರುವ ಸ್ಥಳಕ್ಕೆ ಅತೀ ಸಮೀಪ ಇರುವ ಇ.ಆರ್.ಎಸ್.ಎಸ್ ವಾಹನವು ಸ್ಥಳಕ್ಕೆ ಬಂದು ಅಗತ್ಯ ಸೇವೆಯನ್ನು ಸಲ್ಲಿಸಲಿದೆ ಎಂದು ತಿಳಿಸಿದರು.

ಈ ವೇಳೆ ಹಲವಾಗಲು ಠಾಣೆಯ ಪಿಎಸ್‌ಐ ಪ್ರಶಾಂತ್, ಗುರುರಾಜ್, ಎಎಸ್‌ಐ ಎ. ಹನುಮಂತಪ್ಪ ಸಿಬ್ಬಂದಿಗಳಾದ ಕೂಲಹಳ್ಳಿ ಕೊಟ್ರೇಶ್, ಜಗದೀಶ್, ಎಸ್.ಜಿ.ಚಂದ್ರು, ಜಾತಪ್ಪ, ವಸಂತನಾಯ್ಕ ಸೇರಿದಂತೆ, ಮತ್ತಿತರರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್.ಎಂ. ಎನ್‌ಕ್ಲೇವ್‌ನಲ್ಲಿ ಗ್ಲಾಸ್ ಹೌಸ್ ಹತ್ತಿರ
30x50 East, 60x50 East, 40x75 East, 30x50, 30x50 East ಅಕ್ಕ-ಪಕ್ಕ, 30x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ದಿ. ನೀಲಗುಂದ ಮಹೇಶ್ವರಪ್ಪ ಮತ್ತು ದಿ.ಶ್ರೀಮತಿ ಸುವರ್ಣಮ್ಮ ಇವರ ಜ್ಞಾಪಕಾರ್ಥವಾಗಿ ನೀಲಗುಂದ ಶಾಂತಿನಾಥ್ & ಪ್ರದೀಪ್ ನೀಲಗುಂದ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ, ಹೊಸ ಬನಶಂಕರಿ ಲೇಔಟ್‌ನಲ್ಲಿ 30x48 East,30x50 West, 60x40 West 40 ಅಡಿ ರೋಡಿಗಿದೆ, 40x72 ಪೂರ್ವಕ್ಕೆ ರೋಡ್, ಪಶ್ಚಿಮಕ್ಕೆ ರೋಡ್, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
ಮೊ. : 88677 75564

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಬೇಕಾಗಿದ್ದಾರೆ**
ಹೋಲ್ ಸೇಲ್ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಹುಡುಗ/ಹುಡುಗಿ PUC ಕಾಮರ್ಸ್ ಫೇಲ್/ಪಾಸ್ ಟ್ಯಾಲಿ ಆದವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಶ್ರೀ ರೇವಣಸಿದ್ದೇಶ್ವರ ಟ್ರೇಡರ್ಸ್
ಚಾಮರಾಜಪೇಟೆ, ದಾವಣಗೆರೆ - 1.
78920 18341

**ವಧು ಬೇಕಾಗಿದೆ**
ಖಾಸಗಿ ಕಾಲೇಜ್‌ನಲ್ಲಿ, ಉಪನ್ಯಾಸಕ ವೃತ್ತಿಯಲ್ಲಿರುವ 34 ವರ್ಷ ವಯಸ್ಸಿನ, ಸಾಧಾರಣ ಮೈಕಟ್ಟಿನ, ಸ್ಫುರದ್ರೂಪಿ M. Com., ಆದ ಲಿಂಗಾಯಿತ ಶಿವಸಿಂಪಿ (ಜವಳಿ) ವರನಿಗೆ 28ರ ಆಸುಪಾಸಿನ ಲಿಂಗಾಯಿತ ವಧು ಬೇಕಾಗಿದ್ದಾರೆ. ಸ್ವಂತ ಮನೆ ಹಾಗೂ ಬಾಡಿಗೆ ಬರುವ ಮಳಿಗೆ ಇದ್ದು ವರ ತಂದೆ-ತಾಯಿಗಳೊಂದಿಗೆ ವಾಸವಾಗಿದ್ದಾರೆ. ಆಸಕ್ತರು ಸಂಪರ್ಕಿಸಿರಿ.
ಮುಂಜಾನೆ 9 ರಿಂದ 11 ಸಂಜೆ 6 ರಿಂದ 8
99024 46538, 99162 42588

**ಸುವರ್ಣ ಅವಕಾಶ**
ಯಾವುದೇ ಬಂಡವಾಳವಿಲ್ಲದೆ ನಿಮ್ಮ ಮನೆಯಲ್ಲಿ ನಿಮ್ಮ ಬಿಡುವಿನ ಸಮಯದಲ್ಲಿ ಉದ್ಯೋಗ ಮಾಡುವ ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
85490 54943

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**WANTED**
Female Nurses To Work In A Reputed Hospital In Davanagere. Accomadation Provided. Good Salary.
CALL US ON
80735 15690

**ಶ್ರೀ ಅಣಿಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
9980770791, 9606818273

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ, ಬಾತಿ, ಕೊಂಡಜ್ಜಿ
74112 50447

**BASIC, DTP, PHOTOSHOP, TALLY SPOKEN ENGLISH**
Fee: 600/- Per Course
Door to Door Coaching
74062 78270
97426 10385

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


# ದುಗ್ಗಾಣಿ ಮಠವನ್ನು ದುಡಿಯುವ ಮಠವನ್ನಾಗಿಸಿದ ಶಿವಕುಮಾರ ಶ್ರೀ

## ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಶ್ಲಾಘನೆ



ಸಾಣೇಹಳ್ಳಿ, ಮೇ 2- ದುಗ್ಗಾಣಿ ಮಠವನ್ನು ದುಡಿಯುವ ಮಠವನ್ನಾಗಿಸಿದವರು ತರಳಬಾಳು ಹಿರಿಯ ಜಗದ್ಗುರು ಲಿಂ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಅವರಿಗೆ ಬಸವಣ್ಣನವರ ತತ್ವಾದರ್ಶಗಳ ಬಗ್ಗೆ ಅಪಾರ ಗೌರವವಿತ್ತು ಎಂದು ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಾಣೇಹಳ್ಳಿ ಶ್ರೀ ಶಿವಕುಮಾರ ರಥೋತ್ಸವ ಸಮಿತಿ ಅಂತರ್ಜಾಲದಲ್ಲಿ ಆಯೋಜಿಸಲಾಗಿದ್ದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ 107ನೇ ಜಯಂತಿ ಕುರಿತು ಸಂವಾದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶಿವಕುಮಾರ ಶ್ರೀಗಳು ನಮ್ಮ ಕಾಲದ 'ಯುಗ ಪುರುಷರು'. ಅವರ ವ್ಯಕ್ತಿತ್ವವನ್ನು ಪರಿಚಯಿಸುವ ನಿಟ್ಟಿನಲ್ಲಿ ಸಾಣೇಹಳ್ಳಿಯಲ್ಲಿ ಪ್ರತಿವರ್ಷ ಈ ದಿನದಂದು ಅವರ ರಥೋತ್ಸವವನ್ನು ಯಾವುದೇ ಮೂಢನಂಬಿಕೆ, ಕಂದಾಚಾರಗಳಿಗೆ ಆಸ್ಪದವಿಲ್ಲದೆ ವೈಜ್ಞಾನಿಕವಾಗಿ ಆಯೋಜಿಸುತ್ತಾ ಬರಲಾಗಿದೆ ಎಂದರು.

ಶಿವಕುಮಾರ ಶ್ರೀಗಳವರ ಬದುಕಿನಲ್ಲಿ ಕಾಲ, ಕಾಸು, ಕಾಯಕಕ್ಕೆ ಎಲ್ಲಿಲ್ಲದ ಮಹತ್ವವಿತ್ತು. ಒಂದಿಷ್ಟು ಏರುಪೇರಾದರೂ ಸಹಿಸುತ್ತಿರಲಿಲ್ಲ. ಈ ಬಗ್ಗೆ ಅನೇಕರಿಗೆ ಪ್ರೋತ್ಸಾಹಿಸಿ, ಕೆಲವೊಮ್ಮೆ ಗದರಿಸಿ, ಬೈದು ಬುದ್ದಿ ಹೇಳುತ್ತಿದ್ದರು ಎಂದು ಹೇಳಿದರು.

ವಿದ್ಯಾಸಂಸ್ಥೆಯ ನೌಕರರ ಬಗ್ಗೆ ಅವರಿಗೆ ಅಪಾರ ಅಭಿಮಾನವಿತ್ತು. ಸಂಸ್ಥೆಯನ್ನು ಸ್ಥಾಪಿಸಿದವರು ನಾವಾದರೂ ಅದನ್ನು ಬೆಳೆಸಿದವರು ನೌಕರರು ಎಂದು ಹೇಳುತ್ತಿದ್ದರು. ಮಠದ ನಿಜವಾದ ಆಸ್ತಿ ಭಕ್ತರು, ಅನುಯಾಯಿಗಳೇ ಹೊರತು ಧನ-ಕನಕಗಳಲ್ಲ ಎನ್ನುತ್ತಿದ್ದರು. ಪೀಠವೆಂದೂ ಶಾಶ್ವತವಲ್ಲ. ಅದೊಂದು ಸೇವೆಗೆ ಸಾಧನ ಮಾತ್ರ ಎಂದು ಪರಿಭಾವಿಸಿ ಅದರಂತೆ ನಡೆದುಕೊಂಡವರು ಎಂದು ನುಡಿದರು.

ಸಂವಾದದಲ್ಲಿ ಸಾಣೇಹಳ್ಳಿಯವರು ತರಳಬಾಳು ವಿದ್ಯಾಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ಪ್ರಸ್ತುತ ಸಾಧು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಸಾಹುಕಾರ್ ಸಿದ್ದಪ್ಪ, ನಿವೃತ್ತ ಮುಖ್ಯಶಿಕ್ಷಕ ಬಿ.ಪಿ. ಓಂಕಾರಪ್ಪ ಶ್ರೀಗಳೊಂದಿಗಿನ ತಮ್ಮ ಅನುಭವ ಹಂಚಿಕೊಂಡರು.

ಹೆಚ್.ಎಸ್. ದ್ಯಾಮೇಶ್ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು. ಹೆಚ್.ಎಸ್. ನಾಗರಾಜ್, ಸಾಹಿತ್ಯ ಡಿ.ಎಸ್. ಸುಪ್ರಭೆ, ಡಿ.ಜೆ. ಮುಕ್ತಾ, ಡಿ ಶರಣ್‌ಕುಮಾರ್ ಅವರು ಮಹದೇವ ಬಣಕಾರರು, ಶಿವಕುಮಾರ ಶ್ರೀಗಳ ಕುರಿತು ರಚಿಸಿದ ವಚನಗಳನ್ನು ಹಾಡಿದರು.

# ಜಗಳೂರು : ಕಾರ್ಮಿಕ ವರ್ಗಕ್ಕೆ ನ್ಯಾಯಯುತ ವೇತನ ಸಿಗಬೇಕು



ಜಗಳೂರು, ಮೇ 2- ಸಮಾಜದ ಸ್ವಚ್ಛತೆಗಾಗಿ ದಿನವಿಡೀ ದುಡಿಯುವ ಕಾರ್ಮಿಕ ವರ್ಗಕ್ಕೆ ನ್ಯಾಯಯುತ ಸೌಲಭ್ಯಗಳು ಸಿಗಬೇಕಿದೆ ಎಂದು ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪಿ. ರೇವಣ್ಣ ಹೇಳಿದರು.

ಕಾರ್ಮಿಕ ದಿನಾಚರಣೆ ಅಂಗವಾಗಿ ನಿನ್ನೆ ಬ್ಲಾಕ್ ಕಾಂಗ್ರೆಸ್ ಕಾರ್ಮಿಕ ಘಟಕದ ವತಿಯಿಂದ ಪಟ್ಟಣ ಪಂಚಾಯ್ತಿ ಪೌರ ಕಾರ್ಮಿಕರಿಗೆ ಉಚಿತ ಮಾಸ್ಕ್, ಕುಡಿಯುವ ನೀರು, ಉಪಹಾರ ವಿತರಿಸಿ ಅವರು ಮಾತನಾಡಿದರು.

**ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪಿ. ರೇವಣ್ಣ**

ರಾಜ್ಯದ ಎಲ್ಲೆಡೆ ಕೊರೊನಾ ಮಹಾಮಾರಿ ವ್ಯಾಪಕವಾಗಿ ಹಬ್ಬಿದ್ದು, ಜನರ ಹಿತಕ್ಕಾಗಿ ಪ್ರಾಣದ ಹಂಗು ತೊರೆದು ಕನಿಷ್ಟ ವೇತನ ಪಡೆಯುವ ಮೂಲಕ ಸಮಾಜದ ಕೊಳೆಯನ್ನು ತೊಳೆಯುತ್ತಿರುವ ಕಾರ್ಮಿಕ ವರ್ಗಕ್ಕೆ ನಮ್ಮ ಅಳಿಲು ಸೇವೆ ಮಾಡುವ ಮೂಲಕ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಿದೆ ಎಂದರು.

ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ರಾಜು ಬಣಕಾರ್ ಮಾತನಾಡಿ, ಬಿಸಿಲು, ಮಳೆ ಎನ್ನದೆ ಭಯದ ಹಂಗು ತೊರೆದು ದಿನ ನಿತ್ಯ ದುಡಿಯುತ್ತಿರುವ ಪೌರ ಕಾರ್ಮಿಕರ ಬಗ್ಗೆ ಹಲವು ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳು ಅವರ ನೆರವಿಗೆ ಧಾವಿಸುವ ಮೂಲಕ ಸಹಾಯ ಮಾಡುತ್ತಿರುವುದು ನಾಗರಿಕ ಸಮಾಜದ ಉತ್ತಮ ಬೆಳವಣಿಗೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯ್ತಿ ಕಂದಾಯಾಧಿಕಾರಿ ಸಂತೋಷ್, ಆರೋಗ್ಯಾಧಿಕಾರಿ ಕಿಫಾಯತ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಎಸ್ಟಿ ಘಟಕ ಅಧ್ಯಕ್ಷ ಬಿ. ಲೋಕೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಎನ್.ಟಿ. ತಿಪ್ಪೇಸ್ವಾಮಿ, ವಿಜಯ್ ಕೆಂಚೋಳ್, ರೇಣುಕೇಶ್, ಕರಿಯಣ್ಣ, ಆದರ್ಶ, ನಾಗೇಶ್, ರಮೇಶ್ ಇನ್ನಿತರರಿದ್ದರು.

# ಕೊರೊನಾ ಹರಡದಂತೆ ಜಾಗೃತಿ ವಹಿಸಿ

## ಮಲೇಬೆನ್ನೂರಿನ ಜನತೆಗೆ ಪುರಸಭೆ ಅಧ್ಯಕ್ಷೆ ಶ್ರೀಮತಿ ಮನವಿ



ಮಲೇಬೆನ್ನೂರು, ಮೇ 2 - ಇಲ್ಲಿನ ಪುರಸಭೆ ವತಿಯಿಂದ ಮುದ್ರಿಸಿರುವ ಕೊರೊನಾ ಜಾಗೃತಿ ಕುರಿತಾದ ಭಿತ್ತಿ ಪತ್ರಗಳನ್ನು ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್ ಬಿಡುಗಡೆಗೊಳಿಸಿ ದರು.

ನಂತರ ಮಾತನಾಡಿದ ಶ್ರೀಮತಿ ಅವರು, ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ಕೊರೊನಾ ಬಗ್ಗೆ ಜಾಗೃತಿ ವಹಿಸುವಂತೆ ಮನವಿ ಮಾಡಿರುವ ಭಿತ್ತಿ ಪತ್ರಗಳನ್ನು ಅಂಟಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಹಾಜರಿದ್ದ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಮಾತನಾಡಿ, ಕೋವಿಡ್ ಲಸಿಕೆಯನ್ನು ಪಟ್ಟಣದ ಎಲ್ಲಾ ಜನರಿಗೆ ಹಾಕಿಸುವ ಜವಾಬ್ದಾರಿಯನ್ನು ಪುರಸಭೆ ಸದಸ್ಯರು ತೆಗೆದು ಕೊಳ್ಳಬೇಕೆಂದು ಮನವಿ ಮಾಡಿದರು.

ಪುರಸಭೆ ಉಪಾಧ್ಯಕ್ಷೆ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಮುಖ್ಯಾಧಿಕಾರಿ ದಿನಕರ್, ಸದಸ್ಯರಾದ ಬಿ.ಸುರೇಶ್, ಮಹಾಂತೇಶ್‌ಸ್ವಾಮಿ, ಮಾಸಣಗಿ ಶೇಖರಪ್ಪ, ಬಿ.ಹೆಚ್. ಮಂಜಪ್ಪ, ಪಿ.ಆರ್. ರಾಜು, ಎ.ಕೆ. ಲೋಕೇಶ್, ಆಶ್ರಯ ಸಮಿತಿ ಸದಸ್ಯ ಬಿ. ಚಂದ್ರಪ್ಪ, ಪಿಡಬ್ಲ್ಯೂಡಿ ಶಾಲೆಯ ಎಸ್‌ಡಿ ಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್, ಪಾಳೇಗಾರ್ ನಾಗರಾಜ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಪಾನಿಪೂರಿ ರಂಗನಾಥ್, ಬಿ. ಮಂಜುನಾಥ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಕೇರಳದಲ್ಲಿ ಖಾತೆ ತೆರೆಯದ ಕಮಲ

**(1ನೇ ಪುಟದಿಂದ)** ಸುದೇಂ ದ್ರನ್ ಅವರೂ ಸೋಲುಂಡಿದ್ದಾರೆ.

ರಾಜಧಾನಿಯ ನೇಮಮ್ ಕ್ಷೇತ್ರವನ್ನು ಬಿಜೆಪಿ ಪ್ರತಿನಿಧಿಸು ತ್ತಿತ್ತು. ಈ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಮಿಜೋರಾಂ ಮಾಜಿ ರಾಜ್ಯ ಪಾಲ ಕುಮ್ಮನಮ್ ರಾಜಶೇಖ ರನ್ ಸೋಲು ಕಂಡಿದ್ದಾರೆ.

ಶ್ರೀಧರನ್ ಅವರು ಪಾಲ ಕ್ಕಾಡ್‌ನಲ್ಲಿ ಆರಂಭಿಕ ಮುನ್ನಡೆ ಹೊಂದಿದ್ದರೂ ನಂತರ 3,859 ಮತಗಳಿಂದ ಸೋತಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ಕೆ. ಸುರೇಂದ್ರನ್ ಅವರು ತಾವು ಸ್ಪರ್ಧಿಸಿದ್ದ ಮಜೇಶ್ವರಂ ಹಾಗೂ ಕೊನ್ನಿ ಎರಡೂ ಕ್ಷೇತ್ರಗಳಲ್ಲಿ ಸೋಲು ಕಂಡಿದ್ದಾರೆ.

ರಾಜ್ಯದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಷಾ, ನಿರ್ಮಲಾ ಸೀತಾರಾಮನ್, ರಾಜನಾಥ್ ಸಿಂಗ್ ಹಾಗೂ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಹಲವರು ಪ್ರಚಾರ ನಡೆಸಿದ್ದು ಫಲ ನೀಡಿಲ್ಲ.

# ಬಿಜೆಪಿಗೆ ಜಯ

**(1ನೇ ಪುಟದಿಂದ)** ಪಕ್ಷಕ್ಕೆ ಬದಲಾಗುತ್ತಿತ್ತು. ಕೊನೆ ಕ್ಷಣ ದವರೆಗೂ ತೂಗುಯ್ಯಾಲೆ ಯಲ್ಲಿದ್ದ ಗೆಲುವು, ಕೊನೆಗೆ ಬಿಜೆಪಿ ಕೈ ಹಿಡಿಯಿತು.

ಬಸವಕಲ್ಯಾಣದಲ್ಲಿ ಬಿಜೆಪಿಯ ಶರಣು ಸಲಗರ ಅವರು ಕಾಂಗ್ರೆಸ್ ಅಭ್ಯರ್ಥಿ ಮಾಲಾ ಬಿ. ನಾರಾಯಣ ರಾವ್ ಅವರನ್ನು ಸೋಲಿಸಿದ್ದಾರೆ. ಮಾಲಾ ಅವರು ಕೊರೊನಾದಿಂದ ನಿಧನರಾದ ಕಾಂಗ್ರೆಸ್‌ನ ನಾರಾಯಣ ರಾವ್ ಪತ್ನಿ.

ಸಲಗರ ಅವರು 38,999 ಮತಗಳನ್ನು ಪಡೆದರೆ, ಮಾಲಾ 27,406 ಮತ ಗಳಿಸಿದ್ದಾರೆ. ಜೆಡಿಎಸ್‌ನ ಸೈಯದ್ ಯಸ್ರೂಬ್ ಅಲಿ ಖಾದ್ರಿ 9,509 ಮತ ಗಳಿಸಿದ್ದಾರೆ.

ಮಸ್ಕಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಸವನಗೌಡ ತುರುವಿಹಾಳ್ ಅವರು ಬಿಜೆಪಿಯ ಪ್ರತಾಪಗೌಡ ಪಾಟೀಲ್ ವಿರುದ್ಧ 30,606 ಮತಗಳ ಅಂತರದಲ್ಲಿ ಗೆಲುವು ಕಂಡಿದ್ದಾರೆ.

ಪಾಟೀಲ್ 55,731 ಮತ ಗಳಿಸಿದ್ದರೆ, ತುರುವಿಹಾಳ್ 86,337 ಮತ ಪಡೆದಿದ್ದಾರೆ.

ಈ ಹಿಂದೆ ಕಾಂಗ್ರೆಸ್ ಶಾಸಕರಾಗಿದ್ದ ಪಾಟೀಲ್, 2019ರಲ್ಲಿ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದ್ದರು. ಇದರಿಂದಾಗಿ ಕ್ಷೇತ್ರಕ್ಕೆ ಚುನಾವಣೆ ನಡೆದಿತ್ತು. ಆಪರೇಷನ್ ಕಮಲ ಪಾಟೀಲರಿಗೆ ಆಘಾತ ನೀಡಿದೆ.

# ಮುಂದಿನ ಯಾವುದೇ ಪ್ರವಾಸಕ್ಕೆ ಲಸಿಕೆಯ ಪ್ರಮಾಣ ಪತ್ರ ಸಹಕಾರಿ



ಹೊನ್ನಾಳಿ, ಮೇ 2- ದೇಶದ ಯಾವುದೇ ಪ್ರಜೆಯು ಮುಂಬರುವ ದಿನಗಳಲ್ಲಿ ಅಂತರ ರಾಜ್ಯ, ವಿದೇಶ ಪ್ರವಾಸಕ್ಕೆ ತೆರಳಲು 2ನೇ ಲಸಿಕೆಯೊಂದಿಗೆ ಪಡೆದ ಪ್ರಮಾಣ ಪತ್ರವು ಅವಶ್ಯಕವಾಗಿದೆ ಎಂದು ಸರ್ಕಾರಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಚಂದ್ರಪ್ಪ ಹೇಳಿದರು.


**ಹೊನ್ನಾಳಿ ಸರ್ಕಾರಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಚಂದ್ರಪ್ಪ**

ಅವರು ಹೊನ್ನಾಳಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿ 2ನೇ ಲಸಿಕೆ ನೀಡಿ ಪ್ರಮಾಣ ಪತ್ರ ವಿತರಿಸಿ, ಅದರ ಮಹತ್ವದ ಬಗ್ಗೆ ವಿವರಿಸಿದರು. ಮುಂದಿನ ಯಾವುದೇ ಸಾರ್ವಜನಿಕರ ಪ್ರವಾಸದ ವೇಳೆ ಕೋವಿಡ್ ತಪಾಸಣೆ ಹಾಗೂ ಲಸಿಕೆ ಪಡೆದಿರುವುದು ಈ ಪ್ರಮಾಣ ಪತ್ರದಿಂದ ಮಾತ್ರ ದೃಢಪಡಿಸಲು ಸಾಧ್ಯವಾಗಲಿದೆ ಎಂದರು.

ಹೊನ್ನಾಳಿಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಲಸಿಕೆ ಹಾಕಿಸಿಕೊಂಡು ಪ್ರಮಾಣ ಪತ್ರ ಸ್ವೀಕರಿಸಿ ಮಾತನಾಡಿ, ಸರ್ಕಾರದ ಕೋವಿಡ್ ಮಾರ್ಗಸೂಚಿಗಳನ್ನು ಎಲ್ಲರೂ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಅವಶ್ಯಕತೆ ಹೆಚ್ಚಿದೆ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತರಾದ ರಾಜು, ಷಣ್ಮುಖಯ್ಯ, ಮೃತ್ಯುಂಜಯ ಪಾಟೀಲ್ ಲಸಿಕೆ ಪಡೆದರು. ಮಕ್ಕಳ ತಜ್ಞರಾದ ಡಾ. ಹೆಚ್. ಸಿ.ಸುದೀಪ್, ಸ್ಟಾಫ್ ನರ್ಸ್ ಶಾಂತಕುಮಾರಿ ಉಪಸ್ಥಿತರಿದ್ದರು.

# ಹರಿಹರದ ಶ್ರೀನಿವಾಸ್ ಸ್ನೇಹಿತರ ಬಳಗದಿಂದ ದಾಸೋಹ ಸೇವೆ



ಹರಿಹರ, ಮೇ 2- ಕೊರೊನಾ ನಿಯಂತ್ರಿಸಲು ಹಗಲಿರುಳು ಶ್ರಮ ವಹಿಸುತ್ತಿರುವ ಆರೋಗ್ಯ ಇಲಾಖೆ, ಪೊಲೀಸ್ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಎನ್.ಹೆಚ್. ಶ್ರೀನಿವಾಸ್ ಸ್ನೇಹಿತರ ಬಳಗದ ವತಿಯಿಂದ ನಗರದ ಪೊಲೀಸ್ ಠಾಣೆ ಆವರಣದಲ್ಲಿ ಬೆಳಗ್ಗೆ ಉಪಹಾರ ಮತ್ತು ಮಧ್ಯಾಹ್ನದಲ್ಲಿ ಊಟದ ವ್ಯವಸ್ಥೆ ಮಾಡಲಾಯಿತು.


ಈ ಸಂದರ್ಭದಲ್ಲಿ ಡಾ. ಚಂದ್ರಮೋಹನ್, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ, ಎನ್.ಹೆಚ್. ಶ್ರೀನಿವಾಸ್ ನಂದಿಗಾವಿ. ಸುಚೇತ್, ಸಿಬ್ಬಂದಿಗಳಾದ ನಿಂಗಪ್ಪ, ಸತೀಶ್, ಸುಜಾತ ನಾಯ್ಕ್, ಸುಧಾ ಸಳಾಕೆ, ದೇವರಾಜ್, ಮಂಜುನಾಥ್, ದ್ವಾರಕೀಶ್, ಸಂತೋಷ್ ಇನ್ನಿತರರು ಹಾಜರಿದ್ದರು.

## ಎಸ್.ವೈ. ಉಮಾ ಮಹೇಶ್ವರ ನಿಧನ




ದಾವಣಗೆರೆ ನಿಟುವಳ್ಳಿ ಶ್ರೀ ರಾಮ ಬಡಾವಣೆ ವಾಸಿ ಎಸ್.ವೈ. ದಿ. ಶಿವಲಿಂಗಪ್ಪ ನಾಗಮ್ಮ ಇವರ ಪುತ್ರ
**ಎಸ್.ವೈ. ಉಮಾ ಮಹೇಶ್ವರ**
ಅವರು 2.05.2021 ರ ಭಾನುವಾರ ಮಧ್ಯಾಹ್ನ 3.45 ಕ್ಕೆ ದೈವಾಧೀನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು 03.05.2021 ರ ಸೋಮವಾರ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು: **ಯಡವಣ್ಣನವರ ವಂಶಸ್ಥರು ಹಾಗೂ ಅರೇ ಬಸಾಪುರ ಗ್ರಾಮಸ್ಥರು**

## 23ನೇ ವರ್ಷದ ಸವಿನೆನಪು




**ದಿ|| ಎಸ್.ಸಿ.ಬಸಪ್ಪನವರು**
ನೀವು ನಮ್ಮನ್ನಗಲಿ ಇಂದಿಗೆ 23 ವರ್ಷಗಳಾದವು. ನಿಮ್ಮ ಸವಿನೆನಪು ಸದಾ ಹಸಿರಾಗಿದ್ದು, ಸದಾ ನಿಮ್ಮ ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ
**ಪತ್ನಿ, ಮಗ, ಮಗಳು, ಸೊಸೆ ಮತ್ತು ಮೊಮ್ಮಕ್ಕಳು**
ಫೋ.: 95917 59670

## ಬಿ.ಎಸ್. ಗುಂಡೇಶಿ ಬೂದಾಳ್ ನಿಧನ




ದಾವಣಗೆರೆ ಪಿ.ಜೆ. ಬಡಾವಣೆ ವಾಸಿ ಬಿ.ಎಸ್. ಗುಂಡೇಶಿ ಬೂದಾಳ್ (63) ಅವರು ದಿನಾಂಕ 2.05.2021 ರ ಭಾನುವಾರ ಬೆಳಗ್ಗೆ 5.45ಕ್ಕೆ ನಿಧನರಾದರು. ಪತ್ನಿ, ಪುತ್ರಿ, ಪುತ್ರರು ಹಾಗೂ ಸಹೋದರ, ಸಹೋದರಿ, ಅಳಿಯ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.05.2021ರ ಭಾನುವಾರ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

## ಅಂದನೂರು ಚನ್ನಬಸಮ್ಮ ನಿಧನ




ನಿಜಲಿಂಗಪ್ಪ ಬಡಾವಣೆ 'ಎ' ಬ್ಲಾಕ್, ಮೋರ್ ಹಿಂಭಾಗದ ವಾಸಿ ಅಂದನೂರು ಮಹಾಲಿಂಗಪ್ಪ (ಕಿರಾಣಿ ಅಂಗಡಿ) ಇವರ ಪತ್ನಿ ಅಂದನೂರು ಚನ್ನಬಸಮ್ಮ (82) ಇವರು ದಿನಾಂಕ 2.05.2021 ರ ಭಾನುವಾರ ಸಂಜೆ 5 ಗಂಟೆಗೆ ನಿಧನರಾದರು. ಓರ್ವ ಪುತ್ರಿ, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.05.2021ರ ಸೋಮವಾರ ಬೆಳಗ್ಗೆ 8 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ವಸುಪಾಲಪ್ಪ ನಿಧನ



ದಾವವಣಗೆರೆ ಜಾಲಿನಗರ, 2ನೇ ಮೇನ್, 4ನೇ ಕ್ರಾಸ್ ವಾಸಿ ವಸುಪಾಲಪ್ಪ (74) ಅವರು ದಿನಾಂಕ 2.05.2021ರ ಭಾನುವಾರ ಸಂಜೆ 4.30ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.05.2021 ರ ಭಾನುವಾರ ಗಾಂಧಿನಗರದ ಜೈನ್ ರುದ್ರಭೂಮಿಯಲ್ಲಿ ನೆರವೇರಿತು.

## ಹಳ್ಳೂರು ಸ್ವರ್ಣ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ, ವಿಜಯ ನಗರ ಬಡಾವಣೆ ವಾಸಿ ಶ್ರೀ ಹಳ್ಳೂರು ನಿಜಲಿಂಗಪ್ಪನವರ ಧರ್ಮಪತ್ನಿ ಶ್ರೀಮತಿ ಸ್ವರ್ಣ (58) ಅವರು ಹೃದಯಾಘಾತದಿಂದ ದಿನಾಂಕ 02.05.2021ರ ಭಾನುವಾರ ಸಂಜೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.05.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಉಪಟಳ ನೀಡುತ್ತಿದ್ದ ಗಂಡು ಮುಸಿಯಾ ಸೆರೆ



ಹೊನ್ನಾಳಿ, ಮೇ 2- ಸಾರ್ವಜನಿಕರಿಗೆ ಮತ್ತು ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಉಪಟಳ ನೀಡುತ್ತಿದ್ದ ಗಂಡು ಮುಸಿಯಾವನ್ನು (ಹನುಮಂತ ಲಂಗೂರ್) ಭಾನುವಾರ ಪುರಸಭೆ, ಅರಣ್ಯ ಇಲಾಖೆ ಹಾಗೂ ಶಿವಮೊಗ್ಗದ ವನ್ಯಜೀವಿಗಳ ತಂಡದವರು ಜಂಟಿ ಕಾರ್ಯಾಚರಣೆ ನಡೆಸಿ, ನೀಲಕಂಠೇಶ್ವರ ದೇವಸ್ಥಾನದ ಬಳಿ ಸೆರೆ ಹಿಡಿದಿದ್ದಾರೆ.

ಕಳೆದ 15 ದಿನಗಳಿಂದ ಸುಮಾರು 30ಕ್ಕೂ ಹೆಚ್ಚು ಜನರಿಗೆ ಈ ಮುಸಿಯಾ ಗಾಯಗೊಳಿಸಿತ್ತು. ಕಳೆದ ವರ್ಷ ಒಂದು ಮುಸಿಯಾ ಅಕ್ಟೋಬರ್ ತಿಂಗಳಿಂದ ಡಿಸೆಂಬರ್ 15 ರವರೆಗೆ ಸುಮಾರು 100ಕ್ಕೂ ಹೆಚ್ಚು ಜನರಿಗೆ ಗಾಯಗೊಳಿಸಿದ್ದು, ಕೆಲವರು ಗಂಭೀರವಾಗಿ ಗಾಯಗೊಂಡಿದ್ದರು.

ಸರ್ಕಾರಿ ಆಸ್ಪತ್ರೆಯ ಬಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಪುರಸಭಾ ಅಧ್ಯಕ್ಷ ಕೆ.ವಿ.ಶ್ರೀಧರ್ ಅವರನ್ನು ಅಟ್ಟಿಸಿಕೊಂಡು ಕಚ್ಚಲು ಹೋಗಿತ್ತು. ಅದೃಷ್ಟವಶಾತ್ ಅವರು ತಕ್ಷಣವೇ ಸರ್ಕಾರಿ ಆಸ್ಪತ್ರೆಯ ಒಳಗೆ ಓಡಿ ಹೋಗಿ ಪಾರಾಗಿದ್ದರು. ಸತತ ಮೂರು ತಿಂಗಳ ಪ್ರಯತ್ನದ ಬಳಿಕ ಡಿಸೆಂಬರ್ 16 ರಂದು ಮುಸಿಯಾವನ್ನು ಸೆರೆ ಹಿಡಿದು ಶಿವಮೊಗ್ಗದ ಬಳಿಯಿರುವ ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹಧಾಮಕ್ಕೆ ಕಳುಹಿಸಿಕೊಡಲಾಯಿತು.

ಪುರಸಭಾ ಅಧ್ಯಕ್ಷ ಕೆ.ವಿ.ಶ್ರೀಧರ್, ವಲಯ ಅರಣ್ಯಾಧಿಕಾರಿ ಎಸ್.ಕೆ.ದೇವರಾಜ್ ಮಾತನಾಡಿದರು.

**ಆಂಜನೇಯ ಸ್ವಾಮಿಗೆ ಪೂಜೆ :** ಕಳೆದ ವರ್ಷ ಮುಸಿಯಾವೊಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯ ಬಳಿ ಏಕಾಏಕಿ ಕಚ್ಚಲು ಹೋಗಿತ್ತು. ಅದೃಷ್ಟವಶಾತ್ ಅವರು ಪಾರಾಗಿದ್ದರು. ಮುಸಿಯಾ ಕಚ್ಚಲು ಹೋಗಿದ್ದಕ್ಕೆ ಬಿಜೆಪಿ ಪಕ್ಷದ ಕಾರ್ಯಕರ್ತರುಗಳು, ಕೆಲವು ಹಿರಿಯರು ಸಲಹೆ ನೀಡಿದ್ದರ ಹಿನ್ನೆಲೆಯಲ್ಲಿ ಸಂತೆ ಮೈದಾನದಲ್ಲಿರುವ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆಯನ್ನೂ ಮಾಡಿಸಿದ್ದರು.

ಮುಸಿಯಾ ಕಾರ್ಯಾಚರಣೆಯಲ್ಲಿ ಪುರಸಭಾ ಕಿರಿಯ ಆರೋಗ್ಯ ನಿರೀಕ್ಷಕ ನಾಗೇಶ್, ದಫೇದಾರ್ ಅಂಕಣ್ಣ, ಸಿಬ್ಬಂದಿ ರವಿ, ರಾಜು, ಲಕ್ಷ್ಮಣ, ಅಪ್ಪು, ಶಿವಮೊಗ್ಗದ ವನ್ಯಜೀವಿ ತಜ್ಞರಾದ ಡಾ.ವಿನಯ್, ಡಾ.ನಿಖಿತಾ, ಡಾ.ಸುಜಯ್, ಪ್ರಭಾರಿ ಉಪವಲಯ ಅರಣ್ಯಾಧಿಕಾರಿ ಎಚ್.ಬಿ. ಅಂಜಲಿ, ಅರಣ್ಯ ರಕ್ಷಕರಾದ ಪ್ರಭಾಕರ್, ಆಶಾ, ಚಾಂದ್, ಸಿಬ್ಬಂದಿ ಎಂ.ಆರ್. ಚಂದ್ರಪ್ಪ, ಬಸವರಾಜ್ ಗಾಳಿ, ಚನ್ನೇಶಪ್ಪ, ಕತ್ತಿಗೆ ಲೋಕೇಶಪ್ಪ, ಕತ್ತಿಗೆ ಬಸವರಾಜ್ ಮತ್ತಿತರರು ಪಾಲ್ಗೊಂಡಿದ್ದರು.

# ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವಿಗೆ ಪ್ರತಿರೋಧ ವ್ಯಕ್ತಪಡಿಸುವವರಿಗೆ ಸಹಕರಿಸಬೇಡಿ

ದಾವಣಗೆರೆ, ಮೇ 2- ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿಯನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಿದ ಬಗ್ಗೆ ವರದಿಯನ್ನು ಸರ್ಕಾರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸ ಬೇಕಿದ್ದು, ಸಾರ್ವಜನಿಕರು ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವು ಕಾರ್ಯಾಚರಣೆಗೆ ಯಾವುದೇ ಕಾರಣಕ್ಕೂ ಪ್ರತಿರೋಧ ವ್ಯಕ್ತಪಡಿಸ ಬಾರದಾಗಿ ಹಾಗೂ ಪ್ರತಿರೋಧ ವ್ಯಕ್ತಪಡಿಸುವ ವ್ಯಕ್ತಿಗಳಿಗೆ ಸಹಕಾರ ನೀಡಬಾರದು ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ ತಿಳಿಸಿದ್ದಾರೆ.

ಸರ್ಕಾರದ ಆದೇಶದನ್ವಯ ಸಾರ್ವಜನಿಕ ಸ್ಥಳಗಳಲ್ಲಿ 2009 ರ ಸೆ. 29 ಕ್ಕೂ ಮುಂಚಿತವಾಗಿ ಅನಧಿಕೃತವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡ ಗಳನ್ನು ಆ ಪ್ರದೇಶದ ಪ್ರಶಾಂತತೆಗೆ ಭಂಗವುಂಟು ಮಾಡುವುದಿಲ್ಲವೆಂದು ಖಚಿತ ಪಟ್ಟಲ್ಲಿ, ಅಂತಹ ಕಟ್ಟಡಗಳನ್ನು ಕೆಟಿಸಿಪಿ ಕಾಯ್ದೆ, ಮುನಿಸಿಪಾಲಿಟಿ ಕಾಯ್ದೆ, ಪುರಸಭೆ ಕಾಯ್ದೆ ಮತ್ತು ಇತರೆ ಸ್ಥಳೀಯ ಕಾನೂನು, ಕಾಯ್ದೆಗಳಿಗೆ ವ್ಯತಿರಿಕ್ತವಾಗಿಲ್ಲದಿದ್ದಲ್ಲಿ, ಅವುಗಳನ್ನು ಉಳಿಸಿ ಕೊಂಡು ಕಾನೂನು ಕಾಯ್ದೆಗೊಳಪಟ್ಟಂತೆ ಅಧಿಕೃತಗೊಳಿಸ ಬಹುದಾಗಿರುತ್ತದೆ.



ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ಸಮಸ್ತ ನಾಗರಿಕರಲ್ಲಿ ನಿಮ್ಮ ನಿಮ್ಮ ಗ್ರಾಮ/ಓಣಿ/ಮೊಹಲ್ಲಾ/ಕೇರಿ ಹಾಗೂ ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ನೀವುಗಳೇ ಸ್ವಪ್ರೇರಣೆಯಿಂದ ತೆರವುಗೊಳಿಸುವುದು ಮತ್ತು ನಿರ್ಮಾಣವಾಗದಂತೆ ಎಚ್ಚರವಹಿಸು ವುದು, ಒಂದು ವೇಳೆ ತೆರವುಗೊಳಿಸದೇ ಇದ್ದಲ್ಲಿ ಇಂತಹ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತಾಲ್ಲೂಕು ಆಡಳಿತ ಹಾಗೂ ಸ್ಥಳೀಯ ಸಂಸ್ಥೆಗಳು ತೆರವುಗೊ ಳಿಸಲಿದ್ದು, ಈ ತೆರವು ಕಾರ್ಯಾಚರಣೆಗೆ ಅಗತ್ಯ ಸಹಕಾರವನ್ನು ನೀಡಲು ತಿಳಿಸಿದೆ.

ಸಾರ್ವಜನಿಕ ರಸ್ತೆಗಳಲ್ಲಿ, ಸಾರ್ವಜನಿಕ ಉದ್ಯಾನವನಗಳಲ್ಲಿ ಅನಧಿಕೃತವಾಗಿ ನಿರ್ಮಿಸ ಲಾಗಿರುವ ಮತ್ತು ಧಾರ್ಮಿಕ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿರುವುದು ಕಂಡುಬಂದಲ್ಲಿ ಸಾರ್ವಜನಿಕರು ಈ ಕುರಿತು ಜಿಲ್ಲಾಧಿಕಾರಿಗಳಿಗೆ, ತಾಲ್ಲೂಕು ತಹಶೀಲ್ದಾರರುಗಳಿಗೆ ಮತ್ತು ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಮಾಹಿತಿಯನ್ನು ಒದಗಿಸಬಹುದು ಹಾಗೂ ಮಾಹಿತಿಯನ್ನು ಒದಗಿಸುವ ಸಾರ್ವಜನಿಕರ ಹೆಸರನ್ನು ಬಹಿರಂಗ ಪಡಿಸದೇ ರಹಸ್ಯವಾಗಿಡಲಾಗುವುದು ಎಂದು ಗಿರೀಶ್ ತಿಳಿಸಿದ್ದಾರೆ.

## ಲಯನ್ಸ್ ಕ್ಲಬ್ ನಿಂದ ಆಹಾರ ವಿತರಣೆ



ದಾವಣಗೆರೆ, ಮೇ 2 - ಲಯನ್ಸ್ ಕ್ಲಬ್ ವತಿಯಿಂದ ಆಹಾರ ಪೊಟ್ಟಣಗಳನ್ನು ಲಯನ್ಸ್ ಕ್ಲಬ್ ಹಿರಿಯ ಸದಸ್ಯರುಗಳಾದ ಬೆಳ್ಳೂಡಿ ಶಿವಕುಮಾರ್, ಮಹಾತೇಶ್ ವಿ. ಒಣರೊಟ್ಟಿ ಅವರುಗಳ ನೇತೃತ್ವ ಮತ್ತು ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಅವರ ಅಧ್ಯಕ್ಷತೆಯಲ್ಲಿ ಬಾಪೂಜಿ ಆಸ್ಪತ್ರೆಯ ಹಾಗೂ ಸಿ.ಜಿ. ಆಸ್ಪತ್ರೆಯ ಆವರಣದಲ್ಲಿ ಆಹಾರದ ಪೊಟ್ಟಣ, ನೀರಿನ ಬಾಟಲ್ ಗಳನ್ನು ಆಂಬ್ಯುಲೆನ್ಸ್ ಚಾಲಕರು ಮತ್ತು ಇತರರಿಗೆ ವಿತರಿಸಲಾಯಿತು.

ಲಯನ್ಸ್ ನಿರ್ದೇಶಕರುಗಳಾದ ಎಸ್.ಕೆ.ಮಲ್ಲಿಕಾರ್ಜುನ್, ಎನ್.ಆರ್. ನಾಗಭೂಷಣರಾವ್, ಪಿ.ಹೆಚ್.ಗೋವಿಂದ್ ರಾಜ್, ನೀಲಿ ಉಮೇಶ್, ಪಳನಿಸ್ವಾಮಿ, ಲಯನ್ಸ್ ಕ್ಲಬ್ ಮೇನೇಜರ್ ಆರ್. ನಾಗರಾಜ್ ಅವರುಗಳು ಈ ಸೇವಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಪ್ರಾಪ್ತೆಯ ಮದುವೆಗೆ ನಡೆದಿದ್ದ ಸಿದ್ಧತೆ : ತಡೆ

ದಾವಣಗೆರೆ, ಮೇ 2- ಅಪ್ರಾಪ್ತೆಯನ್ನು 32 ವರ್ಷದ ಯುವಕನಿಗೆ ಸೋಮವಾರ ಮದುವೆ ಮಾಡಲು ಸಿದ್ಧತೆ ನಡೆಸಿದ್ದ ಹಿನ್ನೆಲೆಯಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ, ಗ್ರಾಮ ಪಂಚಾಯತ್, ಸಿಡಿಪಿಓ ಕಚೇರಿ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ತಂಡ ಬಾಲ್ಯ ವಿವಾಹ ತಡೆಯುವಲ್ಲಿ ಯಶಸ್ವಿಯಾಗಿದೆ.

ಮಾಯಕೊಂಡ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿ 32 ವರ್ಷದ ಯುವಕನೊಂದಿಗೆ ಅಪ್ರಾಪ್ತೆಯನ್ನು ಮೇ 3ರಂದು ಮದುವೆ ಮಾಡಿಕೊಡಲು ಸಿದ್ಧತೆ ನಡೆದಿದ್ದ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡದ ಸಂಯೋಜಕ ಟಿ.ಎಂ. ಕೊಟ್ರೇಶ್, ಕುರ್ಕಿ ಗ್ರಾಮ ಪಂಚಾಯಿತಿ ಪಿಡಿಓ ಸುರೇಖಾ, ಶಿಶು ಅಭಿವೃದ್ಧಿ ಯೋಜನೆಯ ಹಿರಿಯ ಮೇಲ್ವಿಚಾರಕರಾದ ಮೈತ್ರಾದೇವಿ, ಮೇಲ್ವಿಚಾರಕಿ ಕೆ.ಸಿ.ಪ್ರಮೀಳಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಮತಾ, ಮಾಯಕೊಂಡ ಠಾಣೆ ಎಎಸ್ಐ ಮೂರ್ತಿ, ಕಾನ್‌ಸ್ಟೇಬಲ್ ಟಿ. ತಿಮ್ಮಪ್ಪ, ಚಾಲಕ ಮಾರುತಿ ಅವರನ್ನು ಒಳಗೊಂಡ ತಂಡ ಅಪ್ರಾಪ್ತೆ ಮನೆಗೆ ಭಾನುವಾರ ಭೇಟಿ ನೀಡಿತ್ತು.

ಅಪ್ರಾಪ್ತೆಯ ಮನೆಯ ಮುಂದೆ ಚಪ್ಪರ ಹಾಕಿ, ಮದುವೆ ಸಿದ್ಧತೆ ನಡೆಸಿದ್ದನ್ನು ತಂಡವು ಗಮನಿಸಿತು. ಬಾಲಕಿಯ ತಂದೆ, ತಾಯಿ, ಸಂಬಂಧಿಗಳನ್ನು ತಂಡವು ಭೇಟಿ ಮಾಡಿ, ಬಾಲಕಿಯ ಶಾಲಾ ದಾಖಲಾತಿ ಸಂಗ್ರಹಿಸಿ, ಪರಿಶೀಲಿಸಿದಾಗ ಮಗುವಿನ ವಯಸ್ಸು 16 ವರ್ಷ 11 ತಿಂಗಳಾಗಿರುವುದು ಕಂಡು ಬಂದಿತು.

ಬಾಲ್ಯ ವಿವಾಹ ನಿಷೇಧ ಕಾಯ್ದೆ ಪ್ರಕಾರ ಬಾಲ್ಯ ವಿವಾಹ ಮಾಡಿದರೆ 1 ವರ್ಷಕ್ಕೆ ಕಡಿಮೆ ಇಲ್ಲದಂತೆ 2 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆ, 1 ಲಕ್ಷ ರೂ. ದಂಡ ಅಥವಾ ಎರಡನ್ನೂ ವಿಧಿಸಬಹುದೆಂದು ಎಚ್ಚರಿಸಲಾಯಿತು.

ಬಾಲಕಿಯ ಹೆತ್ತವರು, ಕುಟುಂಬ ವರ್ಗಕ್ಕೆ ಕಾನೂನು ಬಗ್ಗೆ ತಂಡವು ಅರಿವು ಮೂಡಿಸಿತು. ಆಗ ಬಾಲಕಿಯ ಸಂಬಂಧಿಗಳು ವರನ ತಾಯಿಯು ಅನಾರೋಗ್ಯದಿಂದ ಇದ್ದು, ಇದೇ ಕಾರಣಕ್ಕಾಗಿ ಮದುವೆ ಮಾಡುತ್ತಿದ್ದೇವೆ.

ಮದುವೆ ಮಾಡಲು ಬಿಡಿ ಎಂಬುದಾಗಿ ಪಟ್ಟುಹಿಡಿದರು. ಕೊನೆಗೆ ಕಾನೂನು ಶಿಕ್ಷೆಯ ತೀವ್ರತೆಯ ಬಗ್ಗೆ ಅಧಿಕಾರಿಗಳು, ಮಕ್ಕಳ ಸಹಾಯವಾಣಿ ಸಂಯೋಜಕರು ಮನವರಿಕೆ ಮಾಡಿಕೊಟ್ಟು, ಬಾಲಕಿಯನ್ನು ವಶಕ್ಕೆ ಪಡೆದು, ಸೂಕ್ತ ಪೋಷಣೆ ಮತ್ತು ರಕ್ಷಣೆಗಾಗಿ ದಾವಣಗೆರೆಯ ಬಾಲಕಿಯರ ಬಾಲ ಮಂದಿರಕ್ಕೆ ದಾಖಲಿಸಲಾಗಿದೆ.

## ರಾಣೇಬೆನ್ನೂರು ತಾ.ನಲ್ಲಿ ಸರಳ ಮದುವೆ : ಧರ್ಮಸ್ಥಳದ ಕೊಡುಗೆ



ರಾಣೇಬೆನ್ನೂರು, ಮೇ 2- ನಿಟ್ಟೂರು ಗ್ರಾಮದ ಬಸವರಾಜ ಹಾಗೂ ಅನ್ನಪೂರ್ಣ ಜೋಡಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಸಾಮೂಹಿಕ ವಿವಾಹದಲ್ಲಿ ವಿವಾಹವಾಗಲು ತಮ್ಮ ಹೆಸರನ್ನು ಈ ವರ್ಷ ನೋಂದಾಯಿಸಿಕೊಂಡಿದ್ದು, ಕೊರೊನಾ ಹಿನ್ನಲೆಯಲ್ಲಿ ಸಾಮೂಹಿಕ ವಿವಾಹ ಧರ್ಮಸ್ಥಳದಲ್ಲಿ ರದ್ದಾಗಿರುವ ಕಾರಣ ವಧು-ವರರ ಒಪ್ಪಿಗೆಯಂತೆ ಅವರ ಸ್ವಗ್ರಾಮದಲ್ಲಿ ನೇರವೇರಿಸಲಾಯಿತು.

ತಾಲ್ಲೂಕಿನ ಯೋಜನಾಧಿಕಾರಿಗಳಾದ ಸತೀಶ್ ಶೇಟ್ ಶ್ರೀ ಕ್ಷೇತ್ರದ ಉಡುಗೊರೆಯಾದ ವಧು ಹಾಗೂ ವರನಿಗೆ ಬಟ್ಟೆ, ಮಂಜುನಾಥ ಸ್ವಾಮಿ ಡಾಲರ್, ಮಂಗಳ ಸೂತ್ರ, ಹತ್ತು ಸಾವಿರ ಸಹಾಯ ಧನ ಕೊಟ್ಟು ಶುಭಾಶಯ ತಿಳಿಸಿದರು. ರಾಜ್ಯದಲ್ಲಿ ಒಟ್ಟು 131 ಜೋಡಿಗಳು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹೆಸರನ್ನು ನೋಂದಾಯಿಸಿಕೊಂಡಿದ್ದು, ಕೋವಿಡ್ ಮಾರ್ಗ ಸೂಚಿ ಪಾಲಿಸಿ ಪೂಜ್ಯರ ಮಾರ್ಗದರ್ಶನದಲ್ಲಿ ಸ್ಥಳೀಯವಾಗಿ ಅವರವರ ಮನೆ ಅಥವಾ ದೇವಸ್ಥಾನದಲ್ಲಿ ಈ ವರ್ಷ ನಡೆಸಲು ತೀರ್ಮಾನ ಮಾಡಲಾಗಿತ್ತು. ಅದರಂತೆ ವಿವಾಹ ನೇರವೇರಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮೋದಿಗಿಂತ ದೀದಿಯೇ ಇರಲಿ

**(1ನೇ ಪುಟದಿಂದ)** ಭದ್ರಕೋಟೆಯಾಗಿದ್ದ ಪಶ್ಚಿಮ ಬಂಗಾಳದಲ್ಲಿ, ಎಡರಂಗ ಸಂಪೂರ್ಣ ನೆಲೆ ಕಳೆದುಕೊಂಡಿದೆ.

ಪಶ್ಚಿಮ ಬಂಗಾಳದಲ್ಲಿ ಗೆಲುವು ಸಾಧಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಪೂರ್ಣ ಪ್ರಚಾರ ನಡೆಸಿದ್ದರು. ಅವರಿಗೆ ಗೃಹ ಸಚಿವ ಅಮಿತ್ ಷಾ ಸಹ ಜೊತೆಯಾಗಿದ್ದರು. ಆದರೆ, ಇದಾವುದೂ ಪಕ್ಷಕ್ಕೆ ನಿರೀಕ್ಷಿತ ಫಲ ನೀಡಿಲ್ಲ.

ಎಐಎಡಿಎಂಕೆಯ ಜಯಲಲಿತ ಹಾಗೂ ಡಿಎಂಕೆಯ ಕರುಣಾನಿಧಿ ಅವರಂತಹ ದಿಗ್ಗಜರಿಲ್ಲದೇ ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ, ಆಡಳಿತಾರೂಢ ಎಐಎಡಿಎಂಕೆ - ಬಿಜೆಪಿ ಮೈತ್ರಿಕೂಟ ಪತನ ಕಂಡಿದೆ.

234 ಕ್ಷೇತ್ರಗಳ ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಮೈತ್ರಿಕೂಟ 153 ಕ್ಷೇತ್ರಗಳಲ್ಲಿ ಮುನ್ನಡೆ ಹೊಂದಿದೆ. ಎಐಎಡಿಎಂಕೆ - ಬಿಜೆಪಿ ಮೈತ್ರಿಕೂಟ 77 ಕ್ಷೇತ್ರಗಳಲ್ಲಿ ಮಾತ್ರ ಮೇಲುಗೈ ಹೊಂದಿದೆ.

ಕಳೆದ ನಾಲ್ಕು ದಶಕಗಳಿಂದ ಆಡಳಿತಾರೂಢ ಪಕ್ಷ ಸೋಲುವ ಕೇರಳದ ಪದ್ಧತಿಗೆ ಎಡರಂಗ ಕೊನೆಗೂ ತೆರೆ ಎಳೆಯುವ ಮೂಲಕ ದಾಖಲೆ ಬರೆದಿದೆ. ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಆಡಳಿತಾರೂಢ ಸರ್ಕಾರ ಗೆಲುವಿನ ಮುನ್ನಡೆ ಪಡೆದಿದೆ. 140 ಕ್ಷೇತ್ರಗಳ ಕೇರಳದಲ್ಲಿ ಎಡರಂಗ 90ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುನ್ನಡೆ ಹೊಂದಿದೆ.

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಭರ್ಜರಿ ಗೆಲುವು ದಾಖಲಿಸಿದೆ. 126 ಕ್ಷೇತ್ರಗಳ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 80ಕ್ಕೂ ಹೆಚ್ಚು ಸ್ಥಾನ ಗಳಿಸುವ ಸೂಚನೆ ನೀಡಿದೆ. ಕಾಂಗ್ರೆಸ್ ನೇತೃತ್ವದ ಮಹಾಮೈತ್ರಿಕೂಟ 40 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಲು ಸಾಧ್ಯವಾಗಿದೆ.

ಮುಖ್ಯಮಂತ್ರಿ ಸರ್ಬಾನಂದ ಸೋನಾವಲ್ ಅವರು ಗೆಲುವಿಗಾಗಿ ಜನತೆಗೆ ಧನ್ಯವಾದ ಸಲ್ಲಿಸಿದ್ದಾರೆ. 30 ಕ್ಷೇತ್ರಗಳ ಕೇಂದ್ರಾಡಳಿತ ಪ್ರದೇಶವಾದ ಪುದುಚೆರಿಯಲ್ಲಿ ಎನ್‌ಡಿಎ 16 ಸ್ಥಾನಗಳನ್ನು ಗಳಿಸಿ ಸರ್ಕಾರ ರಚಿಸಲಿದೆ. ಯುಪಿಎ ಮೈತ್ರಿಕೂಟ 8 ಹಾಗೂ ಇತರರು ಆರು ಸ್ಥಾನ ಗಳಿಸಿದ್ದಾರೆ.

## ಬೆಳ್ಳಂಬೆಳಿಗ್ಗೆ ಬಂದ್ ಮಾಡಿಸಿದ ತಹಸೀಲ್ದಾರ್

**(1ನೇ ಪುಟದಿಂದ)** ಬೆಳ್ಳಂಬೆಳಿಗ್ಗೆ ಕೆ.ಆರ್. ಮಾರುಕಟ್ಟೆಗೆ ಧಾವಿಸಿ, ಅಲ್ಲಿ ನಡೆಯುತ್ತಿದ್ದ ವ್ಯಾಪಾರ, ವಹಿವಾಟನ್ನು ಬಂದ್ ಮಾಡಿಸಿದರು.

ಒಂದೇ ಕಡೆಯಲ್ಲಿ ಜನರು ಸೇರದಂತೆ ಯಾವುದೇ ಸಂತೆಗಳಿಗೆ ಅವಕಾಶ ನೀಡಿರಲಿಲ್ಲ. ಆದರೆ, ನಗರದ ಜನತೆ ರಾಜ್ಯ ಸರ್ಕಾರದ ಆದೇಶವನ್ನು ಗಾಳಿಗೆ ತೂರಿ, ಕೊರೊನಾ ಸೋಂಕಿಗೂ, ತಮಗೂ ಯಾವುದೇ ಸಂಬಂಧ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದರು. ಬಹುತೇಕರು ಮಾಸ್ಕ್‌ಗಳನ್ನು ಧರಿಸದೇ ಸಾಮಾಜಿಕ ಅಂತರ ಕಾಪಾಡಿಕೊಳ್ಳದೇ ಓಡಾಡುತ್ತಿದ್ದರು.

ಗಡಿಯಾರ ಕಂಬ, ಕಾಯಿಪೇಟೆ ಮುಖ್ಯರಸ್ತೆ, ಕಾಳಿಕಾದೇವಿ ರಸ್ತೆ, ಕೆ.ಆರ್.ಮಾರುಕಟ್ಟೆಯ ರಸ್ತೆಗಳಲ್ಲಿ ವಿವಿಧ ವ್ಯಾಪಾರಸ್ಥರು ವಹಿವಾಟು ನಡೆಸಿದರು. ಕೊರೊನಾದ ಯಾವುದೇ ಭಯವಿಲ್ಲದೇ ಸಾರ್ವಜನಿಕರು ಗುಂಪು ಗುಂಪಾಗಿ ಸೇರಿ ಖರೀದಿಯಲ್ಲಿ ತೊಡಗಿದ್ದರು. ಈ ನಿಟ್ಟಿನಲ್ಲಿ ತಾಲ್ಲೂಕು ಆಡಳಿತದ ಸಿಬ್ಬಂದಿಗಳು, ಪೌರ ಕಾರ್ಮಿಕರೊಂದಿಗೆ ಆಗಮಿಸಿದ ತಹಶೀಲ್ದಾರ್ ತಕ್ಷಣವೇ ಅಲ್ಲಿ ನಡೆಯುತ್ತಿದ್ದ ವ್ಯಾಪಾರ ವಹಿವಾಟನ್ನು ಬಂದ್ ಮಾಡಿಸಿದರು.

ಇದಲ್ಲದೇ, ರಸ್ತೆಯಲ್ಲಿ ನಿಂತ ತಹಶೀಲ್ದಾರ್ ತರಕಾರಿ ಮಾರಲು ಬಂದ ವ್ಯಾಪಾರಸ್ಥರು ಹಾಗೂ ಖರೀದಿ ಮಾಡಲು ಬಂದ ಗ್ರಾಹಕರನ್ನು ತಾವೇ ವಾಪಸ್ ಕಳುಹಿಸಿದರು. ಅಲ್ಲದೇ ಕೋವಿಡ್ ನಿಯಮಾವಳಿ ಉಲ್ಲಂಘನೆ ಮಾಡಿ ವ್ಯಾಪಾರ, ವಹಿವಾಟು ಮಾಡುತ್ತಿದ್ದ ವ್ಯಾಪಾರಸ್ಥರನ್ನು ತರಾಟೆಗೆ ತೆಗದುಕೊಂಡರು.

ಇದಲ್ಲದೇ ಇಂದಿನಿಂದ ಕೇವಲ ತಳ್ಳು ಗಾಡಿ ಮೂಲಕ ಮಾತ್ರ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಗುಂಪು ಗುಂಪಾಗಿ ಸೇರುವಂತಿಲ್ಲ. ನಿಮ್ಮ ಮನೆಗಳ ಬಾಗಿಲಿಗೆ ತರಕಾರಿ ಬರಲಿದೆ. ಇದಕ್ಕೆ ಪ್ರತಿನಿತ್ಯ ಸಂಜೆಯವರೆಗೂ ಅವಕಾಶ ಕಲ್ಪಿಸಲಾಗಿದೆ. ಯಾರೂ ಕೂಡ ಅನಾವಶ್ಯಕವಾಗಿ ಮಾರುಕಟ್ಟೆಗೆ ಬರಬಾರದು. ಒಂದು ವೇಳೆ ನಿಯಮ ಉಲ್ಲಂಘಿಸಿ ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬೆಳಿಗ್ಗೆಯೇ ಆಗಮಿಸಿದ ಕೆಲವರು ತಮಗೆ ಬೇಕಾದ ತರಕಾರಿಗಳನ್ನು ಖರೀಸಿದಿದರೆ ಮತ್ತೆ ಕೆಲವರು ಅರ್ಧಂಬರ್ಧ ತರಕಾರಿಗಳನ್ನು ಖರೀದಿ ಮಾಡಿತಾಲ್ಲೂಕುಆಡಳಿತದವಿರುದ್ದಗೊಣಗುತ್ತಲೇ ಮನೆಗಳ ಕಡೆಗೆ ಸಾಗಿದರು. ಇನ್ನು ಕೆಲವರು ಆಗ ತಾನೇ ಆಗಮಿಸಿದ ಜನರು ಯಾವುದೇ ತರಕಾರಿ ತೆಗೆದುಕೊಳ್ಳದೇ ನಿರಾಸೆಯಿಂದ ವಾಪಸ್ಸಾದರು.

## ಪಕ್ಷ ಗೆಲ್ಲಿಸಿದರೂ ಮಮತಾಗೆ ಸೋಲು

**(1ನೇ ಪುಟದಿಂದ)** ಸುವೇಂದು ಅಧಿಕಾರಿ, 1736 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ. ಮಮತಾ ಚುನಾವಣೆಯಲ್ಲಿ ಗೆದ್ದಿದ್ದಾರೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ಪರಾಭವಗೊಂಡಿ ರುವುದಾಗಿ ಚುನಾವಣಾ ಆಯೋಗ ತಿಳಿಸಿದೆ. ಈ ಕ್ಷೇತ್ರದ ಮತಗಳ ಮರು ಎಣಿಕೆ ಮಾಡುವಂತೆ ಚುನಾವಣಾ ಆಯೋಗಕ್ಕೆ ತೃಣಮೂಲ ಕಾಂಗ್ರೆಸ್ ಮನವಿ ಸಲ್ಲಿಸಿದೆ.

## ಜಿಲ್ಲೆಯಲ್ಲಿ 317 ಸೋಂಕು ದೃಢ

**(1ನೇ ಪುಟದಿಂದ)** ಹರಿಹರದಲ್ಲಿ 39, ಜಗಳೂರಿನಲ್ಲಿ 17, ಚನ್ನ ಗಿರಿಯಲ್ಲಿ 16, ಹೊನ್ನಾಳಿಯಲ್ಲಿ 19 ಹಾಗೂ ಇತರೆ ಜಿಲ್ಲೆಯ 17 ಸೋಂಕಿತರು ಕಂಡು ಬಂದಿದ್ದಾರೆ. ಮಾಯಕೊಂಡದ 60 ವರ್ಷದ ವ್ಯಕ್ತಿ ಹಾಗೂ ಕೈದಾಳೆಯ 33 ವರ್ಷದ ವ್ಯಕ್ತಿ ಮೃತರಲ್ಲಿ ಸೇರಿದ್ದಾರೆ.

## ಒಡಿಶಾದಲ್ಲಿ ಪತ್ರಕರ್ತರು ಕೊರೊನಾ ವಾರಿಯರ್‌ಗಳು

**ಲಸಿಕೆ, ವಿಮೆ ಹಾಗೂ ಪರಿಹಾರಕ್ಕೆ ರಾಜ್ಯ ಸರ್ಕಾರದ ನಿರ್ಧಾರ**

ಭುವನೇಶ್ವರ, ಮೇ 2 – ಪತ್ರಕರ್ತರನ್ನು ಕೊರೊನಾ ಮುಂಚೂಣಿ ವಾರಿಯರ್ ಗಳೆಂದು ಪರಿಗಣಿಸುವುದಾಗಿ ಒಡಿಶಾ ಸಿಎಂ ನವೀನ್ ಪಾಟ್ನಾಯಕ್ ತಿಳಿಸಿದ್ದಾರೆ.

ಪತ್ರಕರ್ತರು ನಿರಂತರ ಸುದ್ದಿ ನೀಡುವ ಸೇವೆ ಮಾಡುತ್ತಿದ್ದಾರೆ ಹಾಗೂ ಜನರಿಗೆ ಕೊರೊನಾ ಸಂಬಂಧದ ವಿಷಯಗಳನ್ನು ತಿಳಿಸುತ್ತಿದ್ದಾರೆ. ಅವರು ಕೊರೊನಾ ವಿರುದ್ಧದ ಹೋರಾಟದಲ್ಲಿ ದೊಡ್ಡ ಸಹಾಯ ಮಾಡುತ್ತಿದ್ದಾರೆ ಎಂದು ಪಾಟ್ನಾಯಕ್ ತಿಳಿಸಿದ್ದಾರೆ.

ರಾಜ್ಯದಲ್ಲಿ 6,944 ಕಾರ್ಯನಿರತ ಪತ್ರಕರ್ತರಿದ್ದು, ಅವರನ್ನು ಗೋಪ ಬಂಧು ಸಂಬಂಧಿಕ ಸ್ವಾಸ್ಥ್ಯ ವಿಮೆ ಯೋಜನೆ ವ್ಯಾಪ್ತಿಗೆ ತರಲಾಗುವುದು. ಅವರು 2 ಲಕ್ಷ ರೂ.ಗಳ ವಿಮೆ ಪಡೆಯಲಿದ್ದಾರೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಕೊರೊನಾ ಕರ್ತವ್ಯದಲ್ಲಿ ತೊಡಗಿರುವಾಗ ಸಾವನ್ನಪ್ಪುವ ಪತ್ರಕರ್ತರ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ ನೀಡುವುದಾಗಿಯೂ ಅವರು ಹೇಳಿದ್ದಾರೆ. ಕೊರೊನಾ ಮುಂಚೂಣಿ ಕಾರ್ಯಕರ್ತರಾಗಿರುವ ಕಾರಣ ಪತ್ರಕರ್ತರು ಲಸಿಕೆ ಸಹ ಪಡೆಯಲಿದ್ದಾರೆ ಎಂದು ಮೂಲಗಳು ಹೇಳಿವೆ.

## ಶಿರಮಗೊಂಡನಹಳ್ಳಿಯಲ್ಲಿ ಲಸಿಕೆ



ದಾವಣಗೆರೆ, ಮೇ 2- ಸಮೀಪದ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ 45 ವರ್ಷ ಮೇಲ್ಪಟ್ಟ 100 ಜನರಿಗೆ ಕೊರೊನಾ ಲಸಿಕೆ ನೀಡಲಾಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹದಡಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಗ್ರಾ.ಪಂ.ನಿಂದ ಕೋವಿಡ್ ನಿಯಮಗಳನ್ನು ಪಾಲಿಸಲಾಗಿತ್ತು. ಗ್ರಾ.ಪಂ. ವ್ಯಾಪ್ತಿಯಲ್ಲಿ 45 ವರ್ಷ ಮೇಲ್ಪಟ್ಟ 947 ಜನರು ಇದ್ದು, ಎಲ್ಲರಿಗೂ ಲಸಿಕೆ ನೀಡಲಾಗುವುದೆಂದು ವೈದ್ಯಾಧಿಕಾರಿ ಧನಂಜಯ ತಿಳಿಸಿದ್ದಾರೆ. ಗ್ರಾ.ಪಂ. ಅಧ್ಯಕ್ಷರಾದ ವಿನುತ ಸುರೇಶಬಾಬು, ಪಿಡಿಓ ಕಾತ್ಯಾಯಿನಿ ಜಿ.ಎಲ್. ಮತ್ತಿತರರು ಇದ್ದರು.

# ವೆಂಟಿಲೇಟರ್ ನಿರ್ವಹಣೆಯಲ್ಲಿ ಜಿಲ್ಲಾಡಳಿತ ವಿಫಲ



**ಕೊರೊನಾ ಪಾಸಿಟಿವ್ ಚಿಕಿತ್ಸಾ ಮಾಹಿತಿ ನೀಡಲು ಆಗ್ರಹ**

ದಾವಣಗೆರೆ, ಮೇ 2- ಜಿಲ್ಲೆಯಲ್ಲಿ ಕೋವಿಡ್-2ನೇ ಅಲೆ ಸಮುದಾಯಕ್ಕೆ ಹರಡಿದ್ದು, ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಪಾಸಿಟಿವ್ ಪ್ರಕರಣಗಳು ದಾಖಲಾಗುತ್ತಿವೆ. ಇನ್ನು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಪ್ರಕರಣಗಳು ದಾಖಲಾಗಬಹುದು ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಆತಂಕ ವ್ಯಕ್ತಪಡಿಸಿದ್ದಾರೆ.


ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಕೊರೊನಾ ಪಾಸಿಟಿವ್ ಬಂದ ಪ್ರತಿಯೊಬ್ಬರನ್ನೂ ಆಸ್ಪತ್ರೆಗೆ ದಾಖಲಿಸದೇ ಪಾಸಿಟಿವ್ ಬಂದರೂ ಯಾವುದೇ ರೋಗ ಲಕ್ಷಣಗಳಿಲ್ಲದವರಿಗೆ ಹೋಂ ಕ್ವಾರಂಟೈನ್‌ನಡಿ ಚಿಕಿತ್ಸೆಗೆ ಸೂಕ್ತ ಮಾಹಿತಿ ನೀಡಬೇಕು.

ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ವಿವಿಧ ರೀತಿಯ ಚಿಕಿತ್ಸಾ ವಿಧಾನಗಳನ್ನು ನೀಡುತ್ತಿದ್ದು, ಈ ಬಗ್ಗೆ ಆರೋಗ್ಯ ಇಲಾಖೆಯೇ ಪ್ರಕಟಣೆ ಹೊರಡಿಸಬೇಕೆಂದು ಆಗ್ರಹಿಸಿದ್ದಾರೆ.

ನಗರದ ಚಿಗಟೇರಿ ಜಿಲ್ಲಾ ಸ್ಪತ್ರೆಯಲ್ಲಿ 41 ವೆಂಟಿಲೇಟರ್ ಇದ್ದು, 20 ಎಂಎಸ್ ಐಯು ಮತ್ತು ಐಸಿಯುಗೆ ಬಳಸಲಾಗುತ್ತಿದೆ. 20 ವೆಂಟಿಲೇಟರ್‌ಗಳು ಸ್ಟ್ಯಾಂಡ್ ಬೈ ಆಗಿದ್ದು, ಅದಕ್ಕೂ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿರುವ ಅವರು, ಜಿಲ್ಲಾಧಿಕಾರಿಗಳ ಮಾಹಿತಿಯಂತೆ ಒಬ್ಬರು ಮಾತ್ರ ವೆಂಟಿಲೇಟರ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ನಿನ್ನೆ ದಿನ ನಾವೇ ಖುದ್ದಾಗಿ ದಾವಣಗೆರೆಯ ವೆಂಟಿಲೇಟರ್ ಇರುವ ಆಸ್ಪತ್ರೆಗಳಲ್ಲಿ ವಿಚಾರಿಸಿದರೆ, ಒಂದೇ ಒಂದು ವೆಂಟಿಲೇಟರ್ ಸಿಗಲಿಲ್ಲ. ಜಿಲ್ಲಾಧಿಕಾರಿಗಳು ಈ ಕೂಡಲೇ ದಾವಣಗೆರೆಯ ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ವೆಂಟಿಲೇಟರ್‌ಗಳಿವೆ. ಎಷ್ಟು ಭರ್ತಿಯಾಗಿವೆ ಎಂಬುದರ ಬಗ್ಗೆ ಪ್ರಕಟಣೆ ಹೊರಡಿಸಬೇಕೆಂದು ಒತ್ತಾಯಿಸಿದ್ದಾರೆ.

ಮಹಾನಗರ ಪಾಲಿಕೆಯಿಂದ ಕೊರೊನಾದಿಂದ ಮೃತಪಟ್ಟವರಿಗೆ ಉಚಿತವಾಗಿ ಮುಕ್ತಿ ವಾಹಿನಿಯ ಸೌಲಭ್ಯ ಕಲ್ಪಿಸುತ್ತಿರುವುದು ಸ್ವಾಗತಾರ್ಹ. ಆದರೆ, ಇದೇ ವೇಳೆ ಸಹಜ ಮರಣಗಳಿಂದ ಸಾವನ್ನಪ್ಪಿದವರಿಗೂ ತೊಂದರೆ ಆಗದಂತೆ ಉಚಿತವಾಗಿ ಮುಕ್ತಿವಾಹಿನಿಯ ಸೇವೆ ಒದಗಿಸಬೇಕೆಂದು ಮೇಯರ್‌ಗೆ ಸಲಹೆ ನೀಡಿದ್ದಾರೆ.

## ಮಂಗಳಮುಖಿಯರಿಗೆ ದವಸ - ಧಾನ್ಯ



ದಾವಣಗೆರೆ, ಮೇ 2- ಕೋವಿಡ್‌ನಿಂದ ಸಂಕಷ್ಟಕ್ಕೀಡಾಗಿರುವ ಮಂಗಳಮುಖಿಯರು ಮತ್ತು ಬಡವರಿಗೆ ದಿ. ಶಾಮನೂರು ಕಲ್ಲೇಶಪ್ಪ ಮತ್ತು ಶಾಮನೂರು ಜಯಣ್ಣ ಅವರ ಮಕ್ಕಳು ಧಾನ್ಯಗಳ ಕಿಟ್ ಗಳನ್ನು ವಿತರಿಸಿದರು. ಎಪಿಎಂಸಿ ನಿರ್ದೇಶಕ ಪವಿತ್ರ ಶಾಮನೂರು, ಪಿ.ಎಸ್. ಸತೀಶ್, ಜಿಲ್ಲಾ ಮಂಗಳಮುಖಿಯರ ಸಂಘದ ಅಧ್ಯಕ್ಷೆ ಚೈತ್ರ ಮತ್ತಿತರರು ಉಪಸ್ಥಿತರಿದ್ದರು.

# ಗೊಂದಲಕ್ಕೀಡಾಗಿರುವ ಮದುವೆ ಸಮಾರಂಭಗಳು

ಕೊರೊನಾ ಎರಡನೇ ಅಲೆಯ ಕುರಿತು ಅತಿಯಾದ ಭಯ ಸಾರ್ವಜನಿಕರಲ್ಲಿ ಹುಟ್ಟು ತ್ತಿದೆ. ಕೊರೊನಾ ಬಂದು ಸಾಯುವವರಿಗಿಂತ ಕೊರೊನಾದಿಂದ ಭಯಪಟ್ಟು ಸಾಯುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಜಗತ್ತಿನಲ್ಲಿ ಅತಿ ದೊಡ್ಡ ಕಾಯಿಲೆ ಅಂದರೆ 'ಜೀವ ಭಯ'ದ ಕಾಯಿಲೆ. ಈ ಭಯದ ಕಾಯಿಲೆಗೆ ಯಾವ ಔಷಧ ಕೂಡ ಇಲ್ಲ. ಇದಕ್ಕೆ ಒಂದೇ ಪರಿಹಾರ, ಔಷಧಿ ಅಂದರೆ ಧೈರ್ಯ ತುಂಬುವ ಮತ್ತು ಭರವಸೆ ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರ ಮಾಡಬೇಕಾಗಿದೆ.

ಸರ್ಕಾರ ಈ ಕೊರೊನಾ ನಿಯಂತ್ರಣ ಮಾಡುವಲ್ಲಿ ಯಾವ ರೀತಿ ನಿಯಮ, ನಿರ್ಧಾರಗಳ ಕ್ರಮ ತೆಗೆದುಕೊಳ್ಳಬೇಕು ಎಂದು ಗೊಂದಲಕ್ಕೀಡಾಗಿ ಕೆಲವೊಂದು ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲವಾಗುತ್ತಿದೆ. ಈ ಮದುವೆ ಸಮಾರಂಭಗಳಿಗೆ ಸರ್ಕಾರ ನೀಡಿರುವ ಮಾರ್ಗಸೂಚಿ ಮತ್ತು ದಿಢೀರ್ ನಿರ್ಧಾರ, ನಿರ್ಬಂಧಗಳು ಕಾರ್ಯರೂಪದ ಅಳವಡಿಕೆಯಲ್ಲಿ ಸಾರ್ವಜನಿಕರು ಗೊಂದಲ ಮತ್ತು ಕಷ್ಟಕ್ಕೀಡಾಗಿದ್ದಾರೆ. ಅವರ ಮದುವೆ ಮಾಡುವವರ ಕನಸುಗಳೆಲ್ಲಾ ನುಚ್ಚು ನೂರು ಆಗಿವೆ. ಆರ ರಿಂದ 8 ತಿಂಗಳು ಮುಂಚಿತವಾಗಿ ಸಂಬಂಧ ನೋಡಿ ಮುಹೂರ್ತ, ಛತ್ರ, ಅಡುಗೆ ಮಾಡುವವರು, ಅಲಂಕಾರ ಮಾಡುವವರು, ಫೋಟೋಗ್ರಾಫರ್‌ಗಳು, ವಾಲಗದವರು, ಶ್ಯಾಮಿಯಾನದವರು, ಲೈಟ್‌ನವರು ಹೀಗೆ ಅನೇಕರಿಗೆ ಮುಂಗಡ ಹಣ ಕೊಟ್ಟು ಕಚಿತಪಡಿಸಿರುತ್ತಾರೆ. ಬಂಗಾರ, ಬಟ್ಟೆಗಳನ್ನು ಖರೀದಿಸಿ, ಆಹ್ವಾನ ಪತ್ರಿಕೆಗಳನ್ನೂ ಸಹ ಹಂಚಿರುತ್ತಾರೆ. ಅವರವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಸಾಲ ಮಾಡಿಯಾದರೂ ಸಹ ಮಕ್ಕಳ ಮದುವೆ ಮಾಡಬೇಕೆಂದು ಜೀವನ ಪರ್ಯಂತ ಕನಸು ಕಂಡಿರುತ್ತಾರೆ ಮತ್ತು ಈ ಮದುವೆ ಸಮಾರಂಭದ ಮೇಲೆ ಎಷ್ಟೊಂದು ವ್ಯಾಪಾರ ವಹಿವಾಟುಗಳು ಮತ್ತು ಕಾರ್ಮಿಕರು ಅವಲಂಬಿತರಾಗಿರುತ್ತಾರೆ.

ಇಂತಹವರಿಗೆ ಈ ಸರ್ಕಾರದ ದಿಢೀರ್ ನಿರ್ಧಾರಗಳನ್ನು ಕೇಳಿ ಅನೇಕರು ಹಣೆ ಮೇಲೆ ಕೈ ಹೊತ್ತು ಕೂರುವ ಪರಿಸ್ಥಿತಿಗೆ ತಂದಿದೆ ಮತ್ತು ಬೇರೆ ಊರುಗಳಿಂದ ಬರುವವರಿಗೆ ಪ್ರಯಾಣದ ಮತ್ತು ಮದುವೆಗೆ ಬರುವವರಿಗೆ ಈ ಕರ್ಫ್ಯೂ ಸಮಯದಲ್ಲಿ ಪ್ರಯಾಣಿಸಲು ಸ್ಪಷ್ಟ ಮಾಹಿತಿಗಳಿಲ್ಲದಂತೆ ಆಗಿದೆ. ಕೊರೊನಾ ಇರುವ ಸ್ಥಳಗಳಲ್ಲಿ (ಊರುಗಳಲ್ಲಿ) ಕೋವಿಡ್ ನಿಯಮದ ಕಠಿಣ ಕ್ರಮ ತೆಗೆದುಕೊಂಡು ಅದಕ್ಕೆ ಅನುಗುಣವಾಗಿ ಅವಕಾಶ ಮಾಡಿಕೊಡಲಿ. ಪಕ್ಕದ ಊರಲ್ಲಿ ಮಳೆ ಆದ್ರೆ ಈ ಊರಲ್ಲಿ ಲುಂಗಿ ಎತ್ತಿಕೊಂಡು ನಡೆದಂಗೆ ಆಯ್ತು ಈ ನಿಯಮ ಮತ್ತು ನಿರ್ಬಂದಗಳು.

ಛತ್ರಗಳ ಅಳತೆ, ಛತ್ರಗಳಲ್ಲಿ ಇರುವ ವ್ಯವಸ್ಥೆಗಳ ಮೇಲೆ ಮದುವೆಗೆ ಬರುವ ಜನಗಳ ಸಂಖ್ಯೆಗಳನ್ನು ನಿರ್ಧರಿಸಲಿ. ಸಣ್ಣ ಛತ್ರಗಳಲ್ಲಿ ಸಣ್ಣ ಪ್ರಮಾಣದಲ್ಲಿ ಮದುವೆ ಮಾಡುವವರ ಮದುವೆಗೆ ಬರುವ ಜನರ ಸಂಖ್ಯೆಯೂ ಸಹ 50, ದೊಡ್ಡ ಛತ್ರಗಳಲ್ಲಿ ಮದುವೆ ಮಾಡುವವರಿಗೂ ಸಹ 50 ಜನ ಬರಲು ಕಾನೂನು ಮಾಡಿದರೆ ಇದು ಅವೈಜ್ಞಾನಿಕ ನಿರ್ಧಾರಗಳು. ಛತ್ರಗಳ ಅಳತೆಗೆ ಅನುಗುಣವಾಗಿ ಜನಗಳ ಸಂಖ್ಯೆ ನಿರ್ಧರಿಸಲಿ. ಕೊರೊನಾ ನಿಯಮಗಳನ್ನು ಅಳವಡಿಸಿಕೊಂಡು ಸಾಮಾಜಿಕ ಅಂತರ ಕಾಪಾಡಿಕೊಂಡು, ಆರು ಅಡಿ ಅಂತರದಲ್ಲಿ ಕುಳಿತುಕೊಂಡರೂ ಸಹ ದೊಡ್ಡ ಛತ್ರಗಳಲ್ಲಿ ಇನ್ನೂ ಸಾಕಷ್ಟು ಸ್ಥಳಾವಕಾಶ ಖಾಲಿ ಉಳಿದಿರುತ್ತದೆ. ಇಂತಹ ಸಂದರ್ಭಗಳಲ್ಲಿ ಎಲ್ಲರಿಗೂ ಒಂದೇ ರೀತಿ ಕಾನೂನಿನ ನಿರ್ಬಂಧಗಳು, ನಿಯಮಗಳನ್ನು ಅಳವಡಿಸುವುದು ಯಾವ ನ್ಯಾಯ?

ಇದು ಒಂದು ರೀತಿ ಸರ್ಕಾರದ ಅರ್ಥವಿಲ್ಲದ 'ದಿಢೀರ್ ನಿರ್ಧಾರಗಳು' ಸಾರ್ವಜನಿಕರಿಗೆ ಗೊಂದಲಕ್ಕೆ ಈಡು ಮಾಡಿವೆ. ಮದುವೆ ಮಾಡುವ ನಿರ್ಬಂಧನೆಗಳನ್ನು ಸ್ವಲ್ಪ ಸಡಿಲ ಮಾಡಿ ಕೋವಿಡ್-19 ರ ಮಾರ್ಗಸೂಚಿಯಂತೆ ಕಠಿಣ ಕ್ರಮ ಅಳವಡಿಸಿ 200 ಜನಕ್ಕೆ ಮದುವೆ ಬರುವಂತೆ ಮದುವೆ ಮಾಡುವವರಿಗೆ ಸಹಕಾರ ನೀಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಮದುವೆ ಮಾಡುವವರ ಪರವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**- ಹೆಚ್.ವಿ. ಮಂಜುನಾಥಸ್ವಾಮಿ**
**ಮೊ. 98448 82366**


## ವಿವಾಹ ಆರತಕ್ಷತೆ ಮುಂದೂಡಿಕೆ

ನಮ್ಮ ಸುಪುತ್ರಿ

**ಚಿ॥ಕುಂ॥ಸೌ॥ ಹೆಚ್. ಪ್ರಿಯಾಂಕ** B.E. (Civil)

ಹಾಗೂ

**ಚಿ॥ರಾ॥ ವೀರೇಶ್ ದಳವಾಯಿ** B.E. (E&E)

(ಶ್ರೀಮತಿ ಅನಸೂಯ, ಶ್ರೀ ಭೀಮಣ್ಣ ದಳವಾಯಿ, ಚನ್ನೂರು ಇವರ ಸುಪುತ್ರ)

ಇವರ ವಿವಾಹ ಆರತಕ್ಷತೆಯನ್ನು ದಿನಾಂಕ 04-05-2021ರ ಮಧ್ಯಾಹ್ನ ಕೆ.ಇ.ಬಿ. ಸಮುದಾಯ ಭವನ, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕೋವಿಡ್-19ರ 2ನೇ ಅಲೆಯು ತೀವ್ರವಾಗಿ ಹರಡುತ್ತಿರುವ ಕಾರಣ, ರಾಜ್ಯ ಸರ್ಕಾರವು ದಿನಾಂಕ 12-05-2021 ರವರೆಗೆ ಕೋವಿಡ್ ಕರ್ಫ್ಯೂ ಜಾರಿ ಮಾಡಿದೆ. ನಮ್ಮ ನಿಮ್ಮೆಲ್ಲರ ಸುರಕ್ಷತೆಯ ದೃಷ್ಟಿಯಿಂದ ದಿನಾಂಕ 04-05-2021ರ ಮಂಗಳವಾರ ಮಧ್ಯಾಹ್ನ 11-30ಕ್ಕೆ ನಡೆಯಬೇಕಿದ್ದ 'ವಿವಾಹ ಆರತಕ್ಷತೆ ಕಾರ್ಯಕ್ರಮ'ವನ್ನು ಮುಂದೂಡಲಾಗಿದೆ.

ತಮ್ಮ ವಿಶ್ವಾಸಿಗಳು

**ಶ್ರೀಮತಿ ಪುಷ್ಪ ಮತ್ತು ಶ್ರೀ ಜಿ. ಹರಿಹರೇಶ್ವರ**

ಕಿರಿಯ ಇಂಜಿನಿಯರ್ (ವಿ), 220 ಕೆ.ವಿ.ಎಸ್.ಆರ್.ಎಸ್., ವಿದ್ಯುತ್ ನಗರ, ಹದಡಿ ರಸ್ತೆ, ದಾವಣಗೆರೆ.

ಮೊ. 94484 42661, 83105 40471, 81059 45225

# ಮಮತಾ ಗೆಲುವಿನಿಂದ ಪ್ರತಿಪಕ್ಷಗಳಲ್ಲಿ ಉತ್ಸಾಹ

## ಪಕ್ಷಭೇದ ಮರೆತು ಪ್ರಶಂಸೆ, ಹೆಚ್ಚಿನ ಪಾತ್ರದ ನಿರೀಕ್ಷೆ

ನವದೆಹಲಿ, ಮೇ 2 - ಪಶ್ಚಿಮ ಬಂಗಾಳದಲ್ಲಿ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ ನಂತರವೂ ಆಡಳಿತ ವಿರೋಧಿ ಅಲೆ ಹಾಗೂ ಬಿಜೆಪಿ ಸವಾಲನ್ನು ಮೆಟ್ಟಿ ಭರ್ಜರಿ ಗೆಲುವು ದಾಖಲಿಸಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮುಂದಿನ ದಿನಗಳಲ್ಲಿ ಪ್ರತಿಪಕ್ಷಗಳ ನೇತೃತ್ವದಲ್ಲಿ ಮಹತ್ವದ ಪಾತ್ರ ವಹಿಸುವ ಮಾತುಗಳು ಕೇಳಿ ಬರುತ್ತಿವೆ.

ಮಮತಾ ಅವರ ತೃಣಮೂಲ ಕಾಂಗ್ರೆಸ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ ತಕ್ಷಣವೇ ಹಲವಾರು ಪಕ್ಷಗಳ ನಾಯಕರು ಅಭಿನಂದನೆಗಳನ್ನು ತಿಳಿಸಿದ್ದಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಕಾಂಗ್ರೆಸ್ ನಾಯಕ ಶಶಿ ಥರೂರ್ ಟ್ವೀಟ್ ಮಾಡಿದ್ದು, ಕೋಮುವಾದಿ ಹಾಗೂ ಅಸಹಿಷ್ಣು ಶಕ್ತಿಗಳ ವಿರುದ್ಧ ಮಮತಾ ಬ್ಯಾನರ್ಜಿ ಅದ್ಭುತ ಗೆಲುವು ಸಾಧಿಸಿದ್ದಾರೆ ಎಂದಿದ್ದಾರೆ. ಸಿಪಿಐ ನಾಯಕ ಡಿ. ರಾಜ ಹೇಳಿಕೆ ನೀಡಿದ್ದು, ಮಮತಾ ಹೋರಾಟಗಾರ್ತಿ. ಅವರ ಗೆಲುವು ಬಿಜೆಪಿ ಮುಖಕ್ಕೆ ತಪರಾಕಿ ಎಂದಿದ್ದಾರೆ. ಕಾಂಗ್ರೆಸ್ ಹಾಗೂ ಎಡಪಕ್ಷಗಳೆರಡೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಹೋರಾಟ ನಡೆಸಿದ್ದವು.

ಹಣಬಲ ಹಾಗೂ ವಾಮಮಾರ್ಗದ ಹೊರತಾಗಿಯೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಕೋಮುವಾದಿ ಧ್ರುವೀಕರಣದ ಸಿದ್ಧಾಂತವನ್ನು ಬಂಗಾಳದ ಜನರು ತಿರಸ್ಕರಿಸಿದ್ದಾರೆ ಎಂದು ಸಿಪಿಐ (ಎಂ) ಹೇಳಿಕೆ ನೀಡಿದೆ.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮಾತನಾಡಿ, ಬಿಜೆಪಿಯ ದ್ವೇಷ ರಾಜಕಾರಣವನ್ನು ಹೋರಾಟಗಾರ್ತಿ ಮುಖ್ಯಮಂತ್ರಿ ಸೋಲಿಸಿದ್ದಾರೆ ಎಂದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅಜೇಯರಲ್ಲ. ಅವರನ್ನು ಸೋಲಿಸಬಹುದು ಎಂಬ ಸ್ಪಷ್ಟ ಸಂದೇಶವನ್ನು ಮಮತಾ ಬ್ಯಾನರ್ಜಿ ನೀಡಿದ್ದಾರೆ ಎಂದು ಶಿವಸೇನೆಯ ಸಂಸದ ಸಂಜಯ್ ರಾವತ್ ಹೇಳಿದ್ದಾರೆ.

# ಭಾರತವನ್ನು ಬಂಗಾಳ ಉಳಿಸಿದೆ



ಕೊಲ್ಕೊತಾ, ಮೇ 2 - ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ನಂತರ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಇಂದು ಭಾರತವನ್ನು ಬಂಗಾಳ ಉಳಿಸಿದೆ ಎಂದಿದ್ದಾರೆ.


ಇದು ಬಂಗಾಳದ ಜನರ ಜಯ, ಪ್ರಜಾಪ್ರಭುತ್ವದ ಜಯ. ಬಂಗಾಳ ಇಂದು ದೇಶವನ್ನು ಉಳಿಸಿದೆ. ಕೇಂದ್ರ ಸರ್ಕಾರ, ಅದರ ಯಂತ್ರ, ಅದರ ಸಂಸ್ಥೆಗಳ ವಿರುದ್ಧ ಹೋರಾಟದಿಂದ ಈ ಗೆಲುವು ದೊರೆತಿದೆ. ಈ ಗೆಲುವಿನಿಂದ ಮಾನವೀಯತೆ ಉಳಿದಿದೆ ಎಂದು ಮಮತಾ ಹೇಳಿದ್ದಾರೆ.

# ಸೋತರೂ ನೈತಿಕತೆ ಕಳೆದುಕೊಂಡಿಲ್ಲ : ಕಾಂಗ್ರೆಸ್

ನವದೆಹಲಿ, ಮೇ 2 - ಅಸ್ಸಾಂ, ಕೇರಳ, ಪುದುಚೇರಿ ಹಾಗೂ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಳಲ್ಲಿ ಸೋತರೂ ಸಹ ಈ ಕಠಿಣ ಸಮಯದಲ್ಲಿ ಜನರ ದನಿಯಾಗುವ ತನ್ನ ನೈತಿಕತೆ ಹಾಗೂ ಬದ್ಧತೆ ಕಳೆದುಕೊಂಡಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲ, ಸೋಲಿನ ಬಗ್ಗೆ ಆಂತರಿಕ ಸಮಾಲೋಚನೆಯ ನಂತರ ಸರಿಯಾದ ದಾರಿ ಕಂಡುಕೊಳ್ಳಲಾಗುವುದು ಎಂದಿದ್ದಾರೆ. ಅಸ್ಸಾಂ, ಕೇರಳ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಕಾಂಗ್ರೆಸ್ ತೀವ್ರ ಹಿನ್ನಡೆ ಕಂಡಿದೆ. ಆದರೆ, ತಮಿಳುನಾಡಿನಲ್ಲಿ ಕಾಂಗ್ರೆಸ್ ಮಿತ್ರಪಕ್ಷವಾದ ಡಿಎಂಕೆ ಗೆಲುವು ಸಾಧಿಸಿದೆ.

# ರಾಘುವೇಂದ್ರ ಸ್ವಾಮಿ ದರ್ಶನ ಇಲ್ಲ



ರಾಯಚೂರು, ಮೇ 2 - ಕೋವಿಡ್ ಎರಡನೇ ಅಲೆ ಹೆಚ್ಚಾಗಿರುವುದರಿಂದ ಹಾಗೂ ಸರ್ಕಾರದ ನಿಯ ಮದ ಪ್ರಕಾರ ಮಂತ್ರಾಲಯ ಕ್ಷೇತ್ರದಲ್ಲಿ ಇಂದಿನಿಂದ ಭಕ್ತರಿಗೆ ಪ್ರತ್ಯಕ್ಷ ದರ್ಶನ, ತೀರ್ಥ, ಪ್ರಸಾದಗಳಿಗೆ ಅವಕಾಶವಿರುವುದಿಲ್ಲ. ಸ್ಥಳೀಯವಾಗಿ ಲಾಕ್‌ಡೌನ್ ವಿಧಿಸಿರುವುದರಿಂದ ಭಕ್ತರಿಗೆ ಮುಂದಿನ ಸೂಚನೆ ನೀಡುವವರೆಗೂ ಮಂತ್ರಾಲಯಕ್ಕೆ ಬರಲು ಅವಕಾಶವಿಲ್ಲ. ಎಂದಿನಂತೆ ಶ್ರೀ ಮಠದಲ್ಲಿ ಪೂಜಾ ಕೈಂಕರ್ಯಗಳು, ಪಂಚಾಮೃತ, ರಥೋತ್ಸವಾದಿ ಸೇವೆಗಳು ಜರುಗುತ್ತವೆ. ಭಕ್ತರು ಆನ್‌ಲೈನ್ ಮೂಲಕ ಈ ಸೇವೆಗಳಲ್ಲಿ ಪಾಲ್ಗೊಳ್ಳುವಂತೆ ಮಠದ ವ್ಯವಸ್ಥಾಪಕ ವೆಂಕಟೇಶ್ ಜೋಷಿ ತಿಳಿಸಿದ್ದಾರೆ.

# ವೀರಭದ್ರಸ್ವಾಮಿ ಗುಗ್ಗಳ, ಕೆಂಡಾರ್ಚನೆ ರದ್ದು



ದಾವಣಗೆರೆ, ಮೇ 2- ನಗರದ ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರ ಭದ್ರೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ ಕಾರ್ಯ ಕ್ರಮದ ಅಂಗವಾಗಿ ಇದೇ ದಿನಾಂಕ 5 ರ ಬುಧವಾರ ನಡೆಯ ಬೇಕಾಗಿದ್ದ ಶ್ರೀ ವೀರಭದ್ರಸ್ವಾಮಿ ಗುಗ್ಗಳ ಹಾಗೂ ಕೆಂಡಾ ರ್ಚನೆ ಕಾರ್ಯಕ್ರಮವನ್ನು ಕೋವಿಡ್ -19ರ ಸರ್ಕಾರದ ಆದೇಶದ ಪ್ರಕಾರ ರದ್ದು ಮಾಡಲಾಗಿದೆ ಎಂದು ವೀರಯ್ಯ ಸ್ವಾಮಿ ತಿಳಿಸಿದ್ದಾರೆ.

# ಎನ್. ರಾಜು, ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರ ಉಪ ನಿರ್ದೇಶಕ



ದಾವಣಗೆರೆ,ಮೇ 2- ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರ ಉಪ ನಿರ್ದೇಶಕರಾಗಿ ಎನ್. ರಾಜು ಅವರು ಮೊನ್ನೆ ಅಧಿಕಾರ ವಹಿಸಿಕೊಂಡರು.

ಈವರೆಗೂ ಈ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆರ್. ನಾಗರಾಜಪ್ಪ ಅವರು ವಯೋನಿವೃತ್ತಿಯಾದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎನ್. ರಾಜು ಅವರನ್ನು ನೇಮಕ ಮಾಡಲಾಗಿದೆ.

# ವೈದ್ಯಕೀಯ, ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೊರೊನಾ ಕರ್ತವ್ಯಕ್ಕೆ ಉತ್ತೇಜನ

ನವದೆಹಲಿ, ಮೇ 2 – ಕೊರೊನಾ ಪರಿಸ್ಥಿತಿ ಎದುರಿಸುವ ಸಲುವಾಗಿ ವೈದ್ಯಕೀಯ ಹಾಗೂ ನರ್ಸಿಂಗ್ ಕೋರ್ಸ್‌ಗಳಲ್ಲಿನ ವಿದ್ಯಾರ್ಥಿಗಳು ಹಾಗೂ ಉತ್ತೀರ್ಣರಾದವರು ಕೊರೊನಾ ಕರ್ತವ್ಯಕ್ಕೆ ಸೇರಲು ಉತ್ತೇಜನ ನೀಡುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ಸಲಹೆಯ ಕುರಿತು ಪರಿಶೀಲಿಸುತ್ತಿದ್ದಾರೆ. ಸೋಮವಾರ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ನೀಟ್ ಪರೀಕ್ಷೆ ವಿಳಂಬ ಮಾಡುವ ಹಾಗೂ ಎಂ.ಬಿ.ಬಿ.ಎಸ್. ಉತ್ತೀರ್ಣರಾದ ಹಾಗೂ ಅಂತಿಮ ವರ್ಷದಲ್ಲಿರುವ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಕೊರೊನಾ ಕರ್ತವ್ಯಕ್ಕೆ ಬರಲು ಉತ್ತೇಜನ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಈ ರೀತಿ ಕೊರೊನಾ ಕರ್ತವ್ಯದಲ್ಲಿ ತೊಡಗುವವರಿಗೆ ಮುಂದಿನ ದಿನಗಳಲ್ಲಿ ಸರ್ಕಾರಿ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದು ಹಾಗೂ ಹಣಕಾಸು ಉತ್ತೇಜನ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ. ಕೊರೊನಾ ಪ್ರಕ ರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸಿಬ್ಬಂದಿಯ ಮೇಲೆ ತೀವ್ರ ಒತ್ತಡ ಬಿದ್ದಿದೆ. ಕೆಲವೆಡೆ ಕೊರೊನಾ ಟೆಸ್ಟ್ ಸೌಲಭ್ಯಗಳೂ ಒತ್ತಡಕ್ಕೆ ಸಿಲುಕಿವೆ.

# ಕೊರೊನಾ ಸೋಂಕಿತರು, ಬಡವರಿಗೆ ಉಚಿತ ಊಟೋಪಚಾರ



ದಾವಣಗೆರೆ, ಮೇ 2- ಕೊರೊನಾ ಸೋಂಕಿತರು ಹಸಿವಿನಿಂದ ಬಳಲಬಾರದೆಂದು ಅವರ ಹೊಟ್ಟೆ ತುಂಬಿಸುವ ಪುಣ್ಯದ ಕಾಯಕ ಇಂದಿನಿಂದ ಶುಭಾರಂಭಗೊಂಡಿದ್ದು, ಉಚಿತ ಊಟೋಪಚಾರದ ವ್ಯವಸ್ಥೆ ಕಲ್ಪಿಸಲು ದಾನಿಗಳು ಮುಂದಾಗಿದ್ದಾರೆ.

ಪ್ರತಿ ದಿನ ಬೆಳಗ್ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಕಲ್ಪಿಸಲು ಸ್ವಯಂ ಪ್ರೇರಣೆಯಿಂದ ದಾನಿಗಳು ಹೆಜ್ಜೆ ಇಟ್ಟಿರುವುದು ಸಿ.ಜಿ. ಆಸ್ಪತ್ರೆಯಲ್ಲಿ ದಾಖಲಾಗಿರುವ ಕೊರೊನಾ ಸೋಂಕಿತರು ಉಪವಾಸದಿಂದ ನರಳುವುದನ್ನು ತಪ್ಪಿಸಿದಂತಾಗಿದ್ದು, ಮಾನವೀಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಇದಕ್ಕೆ ತರಳಬಾಳು ಸೇವಾ ಸಮಿತಿ ಮತ್ತು ದಾವಣಗೆರೆ ಶಿವಸೈನ್ಯ ಯುವಕರ ಸಂಘ ಹಾಗೂ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಸಾಕ್ಷಿಯಾಗಿವೆ.

**ಸೇವೆ ಪ್ರಾರಂಭ:** ಇಂದಿನಿಂದ ಉಚಿತ ಊಟೋಪಚಾರದ ಸೇವೆ ಪ್ರಾರಂಭವಾಗಿದ್ದು, ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ವತಿಯಿಂದ ಬೆಳಗಿನ ಉಪಹಾರ ಹಾಗೂ ತರಳಬಾಳು ಸೇವಾ ಸಮಿತಿ ಮತ್ತು ದಾವಣಗೆರೆ ಶಿವಸೈನ್ಯ ಯುವಕರ ಸಂಘದ ಮಧ್ಯಾಹ್ನದ ಊಟೋಪಚಾರ ಸಿದ್ಧತೆ ಪರಿಶೀಲಿಸಿ, ಶಾಸಕ ಎಸ್.ಎ. ರವೀಂದ್ರನಾಥ್ ಚಾಲನೆ ನೀಡಿದರು. ಅಲ್ಲದೇ, ಈ ಪುಣ್ಯದ ಸೇವೆಗೆ ಪ್ರಶಂಸೆ ವ್ಯಕ್ತಪಡಿಸಿದರು.

ತಾವೂ ಸಹ ಊಟದ ಪೊಟ್ಟಣಗಳನ್ನು ಸಿದ್ಧಪಡಿಸಿ ನಂತರ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ಊಟ ಇಲ್ಲದೇ ಕೊರೊನಾ ಸೋಂಕಿತರು ಸಾಯುವುದನ್ನು ಕಣ್ಣಾರೆ ಕಂಡಿದ್ದು, ಈ ಬಗ್ಗೆ ಗಮನ ಹರಿಸಲು ನಗರ ಪಾಲಿಕೆ ಕೊರೊನಾ ಸಭೆಯಲ್ಲಿ ಪತ್ರಕರ್ತರಿಂದ ಮನವಿ ಕೇಳಿ ಬಂದಿತ್ತು. ಹಾಗಾಗಿ ಸ್ನೇಹಿತರು, ಹಿತೈಷಿಗಳ ಜೊತೆಗೆ ಚರ್ಚಿಸಿದಾಗ ದಾನಿಗಳು ಸಹಾಯ ಹಸ್ತ ಚಾಚಲು, ನೆರವಾಗಲು ಮುಂದೆ ಬಂದಿದ್ದಾರೆ ಎಂದು ತಿಳಿಸಿದರು.

ಇಂದಿನಿಂದ ಬೆಳಗ್ಗಿನ ಉಪಹಾರದ ವ್ಯವಸ್ಥೆಯನ್ನು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ವತಿಯಿಂದ ಕಲ್ಪಿಸಲಾಗಿದ್ದು, ಅದಕ್ಕೆ ಅವಶ್ಯಕ ದಿನಸಿ ಖರ್ಚನ್ನು ಚನ್ನಬಸಪ್ಪ ಅಂಡ್ ಸನ್ಸ್ ಭರಿಸಲಿದೆ. ಆಸ್ಪತ್ರೆಗಳಲ್ಲಿನ ಕೋವಿಡ್ ಸೋಂಕಿತರಿಗೆ ಈ ಸೋಂಕು ದೂರವಾಗುವ ತನಕ ಸೇವೆ ಸಿಗಲಿದೆ. ತರಳಬಾಳು ಸೇವಾ ಸಮಿತಿ ಮತ್ತು ದಾವಣಗೆರೆ ಶಿವಸೈನ್ಯ ಯುವಕರ ಸಂಘದವರು ಮಧ್ಯಾಹ್ನ, ರಾತ್ರಿ ಊಟದ ವ್ಯವಸ್ಥೆ ಕಲ್ಪಿಸಲಿದ್ದು, ಆಸ್ಪತ್ರೆಯಲ್ಲಿ ಡಯಾಬಿಟಿಕ್ ವುಳ್ಳ ಕೊರೊನಾ ಸೋಂಕಿತರಿಗೆ ಕೇವಲ ಅನ್ನ, ಸಾಂಬಾರ್ ಮಾತ್ರ ನೀಡಲಾಗುತ್ತಿದ್ದು, ಅವರಿಗೆ ಚಪಾತಿ, ರೊಟ್ಟಿ ಪೌಷ್ಠಿಕ ಆಹಾರದ ಅವಶ್ಯವಿರುವುದಾಗಿ ವೈದ್ಯರು ಸಲಹೆ ನೀಡಿದ ಕಾರಣ ಚಪಾತಿ, ಕಾಳಿನ ಪಲ್ಯ ನೀಡುವರು ಎಂದು ವಿವರಿಸಿದರು.

ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಗೌರವಾಧ್ಯಕ್ಷ ಶಶಿಧರ್ ಹೆಮ್ಮನಬೇತೂರು ಮಾತನಾಡಿ, ಪ್ರತಿ ದಿನ ಮಧ್ಯಾಹ್ನ 400 ಮಂದಿ ಮತ್ತು ರಾತ್ರಿ 400 ಮಂದಿ ಒಟ್ಟು 800 ಮಂದಿ ಕೊರೊನಾ ರೋಗಿಗಳಿಗೆ ಉಚಿತ ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ಈ ಸೇವೆ ಪುಣ್ಯದ ಕಾರ್ಯವಾಗಿದೆ ಎಂದರು.

ಈ ಪುಣ್ಯದ ಕಾರ್ಯವನ್ನು ನಡೆಸುವ ಸಂಬಂಧ

## ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದಿಂದ ಪುಣ್ಯದ ಕಾರ್ಯ

ಊಟೋಪಚಾರಗಳ ಸಿದ್ಧತೆ ಮಾಡಿಕೊಳ್ಳಲು ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನವನ್ನು ಉಚಿತವಾಗಿ ನೀಡಿರುವ ಸಾಧು ಸದ್ಧರ್ಮ ಸಂಘದ ಅಧ್ಯಕ್ಷರಾದ ಕೆ.ಆರ್. ಜಯದೇವಪ್ಪ, ಕಲ್ಯಾಣ ಮಂಟಪದ ವ್ಯವಸ್ಥಾಪಕರಾದ ವೈ. ವಸಂತಪ್ಪ ಅವರುಗಳಿಗೆ ಶಶಿಧರ್ ಹೆಮ್ಮನಬೇತೂರು ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಎಸ್ಪಿ ಹನುಮಂತರಾಯ, ವರ್ತಕ ಬಿ.ಸಿ. ಉಮಾಪತಿ, ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಅಧ್ಯಕ್ಷ ಲಿಂಗರಾಜು ಅಗಸನಕಟ್ಟೆ, ಮಾಗನೂರು ಉಮೇಶ್ ಗೌಡ್ರು, ಶ್ರೀನಿವಾಸ್ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಕೊರಟಿಕೆರೆ ಶಿವಕುಮಾರ್, ಸತೀಶ್ ಸಿರಿಗೆರೆ, ಸುನೀಲ್ ದಾಸಪ್ಪ, ಕುಮಾರ ಮೆಳ್ಳೇಕಟ್ಟೆ, ಹಾಲೇಶ್ ಕಂಸಾಗರ, ಧನ್ಯಕುಮಾರ್, ವೀರಬಸಪ್ಪ ಮೆಳ್ಳೇಕಟ್ಟೆ, ಹರೀಶ್ ಬೆಳ್ಳಿಗನೂಡು, ದೇವರಾಜ ಅಗಸನಕಟ್ಟೆ, ಅಜಯ್ ಕುಮಾರ್ ವೊಡ್ಡಿನಹಳ್ಳಿ ಸೇರಿದಂತೆ ಇತರರು ಇದ್ದರು.

ನಿರಂತರವಾಗಿ ನಡೆಯುವ ಈ ದಾಸೋಹ ಕಾರ್ಯಕ್ಕೆ ಸೇವೆ ಸಲ್ಲಿಸಲಿಚ್ಛಿಸುವವರು ಶಶಿಧರ್ ಹೆಮ್ಮನಬೇತೂರು ಅಥವಾ ಮಾಗನೂರು ಉಮೇಶ್ ಗೌಡ ಅವರನ್ನು ಸಂಪರ್ಕಿಸಬಹುದು.

# ಆಕ್ಸಿಜನ್ ಘಟಕಗಳ ಬಳಿ 10 ಸಾವಿರ ಬೆಡ್‌ಗಳ ತಾತ್ಕಾಲಿಕ ಆಸ್ಪತ್ರೆ : ಕೇಂದ್ರದ ನಿರ್ಧಾರ

ನವದೆಹಲಿ, ಮೇ 2 – ಆಕ್ಸಿಜನ್ ಉತ್ಪಾದಿಸುವ ಘಟಕಗಳ ಬಳಿ 10 ಸಾವಿರ ಆಕ್ಸಿಜನ್ ಬೆಡ್‌ಗಳ ತಾತ್ಕಾಲಿಕ ಆಸ್ಪತ್ರೆಗಳನ್ನು ರೂಪಿಸಲು ಸರ್ಕಾರ ಮುಂದಾಗಿದೆ. ಇದರಿಂದಾಗಿ ಕೊರೊನಾ ರೋಗಿಗಳಿಗೆ ತ್ವರಿತವಾಗಿ ಜೀವರಕ್ಷಕ ಆಕ್ಸಿಜನ್ ಸಿಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೊರೊನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾನುವಾರ ಹಲವಾರು ಸಭೆಗಳನ್ನು ನಡೆಸಿದ್ದು, ಅದರಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈಗಿರುವ ನೈಟ್ರೋಜನ್ ಉತ್ಪಾದನಾ ಘಟಕಗಳಲ್ಲಿ ಆಕ್ಸಿಜನ್ ಉತ್ಪಾದಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ.

ಉಕ್ಕು, ಪೆಟ್ರೋಲಿಯಂ ಸಂಸ್ಕರಣೆ ಸೇರಿದಂತೆ ಹಲವಾರು ಘಟಕಗಳು ಆಕ್ಸಿಜನ್ ಉತ್ಪಾದಿಸುತ್ತವೆ. ಈ ಆಕ್ಸಿಜನ್ ಅನ್ನು ವೈದ್ಯಕೀಯ ಉದ್ದೇಶಕ್ಕೆ ಬಳಸಿಕೊಳ್ಳಬಹುದು ಎಂದು ಸಭೆಯಲ್ಲಿ ತಿಳಿಸಲಾಗಿದೆ.

ನಗರಗಳು, ಜನದಟ್ಟಣೆ ಹೆಚ್ಚಾಗಿರುವ ಪ್ರದೇಶಗಳು ಹಾಗೂ ಬೇಡಿಕೆ ಹೆಚ್ಚಾಗಿರುವ ಪ್ರದೇಶಗಳ ಬಳಿ ಇರುವ ಇಂತಹ ಆಕ್ಸಿಜನ್ ಘಟಕಗಳನ್ನು ಗುರುತಿಸಬೇಕು.

ಸಮೀಪದಲ್ಲೇ ತಾತ್ಕಾಲಿಕ ಕೊರೊನಾ ಆಸ್ಪತ್ರೆಗಳನ್ನು ನಿರ್ಮಿಸಿ ಆಕ್ಸಿಜನ್ ಬೆಡ್‌ಗಳನ್ನು ಒದಗಿಸಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

ಪ್ರಯೋಗಿಕವಾಗಿ ಇಂತಹ ಐದು ಘಟಕಗಳನ್ನು ಈಗಾಗಲೇ ಸ್ಥಾಪಿಸಲಾಗಿದ್ದು, ಕಾಮಗಾರಿ ಮುಂದುವರೆದ ಹಂತದಲ್ಲಿದೆ. ಸರ್ಕಾರಿ ಇಲ್ಲವೇ ಖಾಸಗಿ ಕೈಗಾರಿಕೆಗಳ ಮೂಲಕ ಅಗತ್ಯ ಆಕ್ಸಿಜನ್ ಪಡೆಯಲಾಗುವುದು. ಇದಕ್ಕೆ ಕೇಂದ್ರ ಹಾಗೂ ರಾಜ್ಯಗಳು ಸಮನ್ವಯತೆ ತೋರಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

10 ಸಾವಿರ ಆಕ್ಸಿಜನ್ ಘಟಕಗಳು ಅತ್ಯಲ್ಪ ಅವಧಿಯಲ್ಲಿ ಘಟಕಗಳ ಬಳಿ ಲಭ್ಯವಾಗುವ ನಿರೀಕ್ಷೆ ಇದೆ. ರಾಜ್ಯಗಳೂ ಸಹ ಇಂಥದೇ ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

ಪ್ರಧಾನಿ ಮೋದಿ ಸಭೆಯಲ್ಲಿ ಪ್ರೆಷರ್ ಸ್ವಿಗ್ ಅಡ್ಸಾರ್ಪ್‌ಷನ್ (ಪಿ.ಎಸ್.ಎ.) ಘಟಕಗಳ ಸ್ಥಾಪನೆಯ ಬಗ್ಗೆಯೂ ವಿವರ ಪಡೆದಿದ್ದಾರೆ. ಇಂತಹ 1,500 ಘಟಕಗಳನ್ನು ಪಿಎಂ ಕೇರ್ಸ್ ಮತ್ತಿತರೆ ಮಾರ್ಗಗಳ ಮೂಲಕ ಸ್ಥಾಪಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ತಿಳಿಸಲಾಗಿದೆ.

# ಕಾಂಗ್ರೆಸ್ ಹಾದಿ ಇನ್ನಷ್ಟು ಕಠಿಣ

ನವದೆಹಲಿ, ಮೇ 2 - ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತಕ್ಕೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತಷ್ಟು ಹಿನ್ನಡೆ ಅನುಭವಿಸಿದ್ದು, ಕೇವಲ ತಮಿಳುನಾಡಿನಲ್ಲಿ ಮಾತ್ರ ಡಿಎಂಕೆ ಜೊತೆಗೆ ಒಂದಿಷ್ಟು ಗೆಲುವು ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಪಕ್ಷ ಸೊನ್ನೆ ಸುತ್ತಿದೆ. ಅಸ್ಸಾಂ ಹಾಗೂ ಕೇರಳದಲ್ಲಿ ಪ್ರತಿಪಕ್ಷದ ಸ್ಥಾನದಿಂದ ಅಧಿಕಾರಕ್ಕೆ ಜಿಗಿಯುವ ಕನಸು ನನಸಾಗಿಲ್ಲ.

ಬಿಜೆಪಿ ಎದುರಿಸಲು ಕಾಂಗ್ರೆಸ್ಸೇತರ ರಂಗ ಬೇಕು ಎಂಬ ದನಿ ಈಗಾಗಲೇ ಕೇಳಿ ಬರುತ್ತಿದೆ. ಆ ದನಿಗೆ ಮತ್ತಷ್ಟು ಬಲ ಬರಲಿರುವುದು ಕಾಂಗ್ರೆಸ್‌ನ ಗಾಂಧಿ ಕುಟುಂಬಕ್ಕೆ ದೊಡ್ಡ ಸವಾಲಾಗಿದೆ.

ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಕೇರಳದಲ್ಲಿ ವ್ಯಾಪಕ ಪ್ರಚಾರ ಮಾಡಿದ್ದರು. ಆದರೆ, ಪಕ್ಷದ ಆಂತರಿಕ ಬಿಕ್ಕಟ್ಟು ಬಗೆಹರಿಸಲು ಸಾಧ್ಯವಾಗಲಿಲ್ಲ. ಅತಿ ಹೆಚ್ಚಿನ ಲೋಕಸಭಾ ಸದಸ್ಯರನ್ನು ಕಾಂಗ್ರೆಸ್‌ಗೆ ಕೊಟ್ಟಿದ್ದ ಕೇರಳದಲ್ಲೇ ಪಕ್ಷ ಮುಗ್ಗರಿಸಿದೆ. ರಾಹುಲ್ ಗಾಂಧಿ ಸಹ ಕೇರಳದ ವಯನಾಡ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಜೂನ್ ವೇಳೆಗೆ ಹೊಸ ಅಧ್ಯಕ್ಷರನ್ನು ಹೊಂದುವುದಾಗಿ ಕಾಂಗ್ರೆಸ್ ಕಳೆದ ಜನವರಿಯಲ್ಲಿ ತಿಳಿಸಿತ್ತು. ಸೋಲಿನ ನಡುವೆಯೇ ನಾಯಕತ್ವದ ಪ್ರಶ್ನೆಯೂ ಈಗ ಎದುರಾಗಿದೆ. ರಾಹುಲ್ ಗಾಂಧಿ ಸಹೋದರಿ ಪ್ರಿಯಾಂಕ ಗಾಂಧಿ ವಾದ್ರಾ ಸಹ ಕೇರಳ ಹಾಗೂ ಅಸ್ಸಾಂಗಳಲ್ಲಿ ವ್ಯಾಪಕ ಪ್ರಚಾರ ಮಾಡಿದ್ದರು. ಇದ್ಯಾವುದೂ ಪಕ್ಷಕ್ಕೆ ಚೈತನ್ಯ ತಂದಿಲ್ಲ. ಕಾಂಗ್ರೆಸ್ ಸ್ವಂತ ಬಲದಲ್ಲಿ ಪಂಜಾಬ್, ರಾಜಸ್ಥಾನ ಹಾಗೂ ಛತ್ತೀಸ್‌ಘಡಗಳಲ್ಲಿ ಅಧಿಕಾರದಲ್ಲಿದೆ. ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ಗಳಲ್ಲಿ ಆಡಳಿತಾರೂಢ ಮೈತ್ರಿಕೂಟದಲ್ಲಿದೆ.

# ಗಣಿತದ ಮಾದರಿಗಳ ಲೆಕ್ಕಕ್ಕೆ ಸಿಗದ ಕೊರೊನಾ ಎರಡನೇ ಅಲೆ

ನವದೆಹಲಿ, ಮೇ 2 – ದೇಶದಲ್ಲಿ ಕಂಡುಬರುತ್ತಿರುವ ಕೊರೊನಾದ ಎರಡನೇ ಅಲೆ ಯಾವ ರೀತಿ ಸಾಗಲಿದೆ ಎಂಬುದು ಗಣಿತ ಮಾದರಿಗಳ ಲೆಕ್ಕಕ್ಕೆ ಸಿಗುತ್ತಿಲ್ಲ ಎಂದು ಕೊರೊನಾ ಮುನ್ಸೂಚನೆ ನೀಡುವ ತಂಡದ ವಿಜ್ಞಾನಿಗಳು ಹೇಳಿದ್ದು, ಕೊರೊನಾ ಹರಡುವಿಕೆ ಇತ್ತೀಚಿನ ಸಮಯದಲ್ಲಿ ಗಣನೀಯವಾಗಿ ಬದಲಾಗಿದೆ ಎಂದು ಹೇಳಿದ್ದಾರೆ.

ಈ ಬಗ್ಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೇಳಿಕೆ ಬಿಡುಗಡೆ ಮಾಡಿದ್ದು, ಇದಕ್ಕೆ ಐಐಟಿ ಕಾನ್‌ಪುರದ ಪ್ರೊ. ಮನೀಂದ್ರ ಅಗರ್‌ವಾಲ್, ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ ಡೆಪ್ಯುಟಿ ಚೀಫ್ ಮಾಧುರಿ ಕಾನಿಟ್ಕರ್ ಹಾಗೂ ಐಐಟಿ ಹೈದರಾಬಾದ್‌ನ ಪ್ರೊ. ಎಂ. ವಿದ್ಯಾಸಾಗರ್ ಅವರು ಸಹಿ ಹಾಕಿದ್ದಾರೆ.

ತಮ್ಮ ಗಣಿತದ ಮಾದರಿಗಳು ಏಪ್ರಿಲ್ ಮೂರನೇ ವಾರದಲ್ಲಿ ಪ್ರತಿದಿನದ ಪ್ರಕರಣಗಳ ಸಂಖ್ಯೆ ಒಂದು ಲಕ್ಷದ ಹತ್ತಿರ ಇರುತ್ತವೆ ಎಂದು ತಿಳಿಸಿದ್ದವು ಎಂದವರು ಹೇಳಿದ್ದಾರೆ. ಆದರೆ, ಆ ವೇಳೆಗೆ ಪ್ರತಿದಿನ ಮೂರು ಲಕ್ಷದಷ್ಟು ಕೊರೊನಾ ಸೋಂಕಿತರು ಕಂಡು ಬಂದಿದ್ದರು.

ಕೇಂದ್ರ ಸರ್ಕಾರಕ್ಕೆ ಎರಡನೇ ಅಲೆಯ ಮುನ್ನೆಚ್ಚರಿಕೆ ನೀಡಲಾಗಿತ್ತು. ಆದರೆ, ಅದನ್ನು ಕಡೆಗಣಿಸಲಾಗಿತ್ತು ಎಂಬ ವರದಿಗಳನ್ನೂ ಸಹ ವಿಜ್ಞಾನಿಗಳ ತಂಡ ತಳ್ಳಿ ಹಾಕಿದೆ.

ಕೊರೊನಾ ಪ್ರಕರಣಗಳ ಮುನ್ಸೂಚನೆ ಪಡೆಯಲು ಸರ್ಕಾರ ಕಳೆದ ವರ್ಷ ವಿಜ್ಞಾನಿಗಳು, ಗಣಿತ ತಜ್ಞರು ಹಾಗೂ ಪರಿಣಿತರ ತಂಡವೊಂದನ್ನು ರಚಿಸಿತ್ತು. ವೈರಸ್ ಸ್ವಭಾವ ವೇಗವಾಗಿ ಬದಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಮುನ್ನೆಚ್ಚರಿಕೆಯನ್ನು ನಿರಂತರವಾಗಿ ಮರು ಹೊಂದಾಣಿಕೆ ಮಾಡಬೇಕಾಗುತ್ತದೆ. ಕೆಲವೊಮ್ಮೆ ಪ್ರತಿನಿತ್ಯ ಬದಲಾವಣೆಯ ಅಗತ್ಯ ಬರುತ್ತದೆ ಎಂದು ತಂಡ ಹೇಳಿದೆ.

ನಾವು ಸರ್ಕಾರದ ಜೊತೆ ನಿಕಟವಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ನಮ್ಮ ಮಾಹಿತಿಯನ್ನು ಸಕಾರಾತ್ಮಕವಾಗಿ ಸ್ವೀಕರಿಸಲಾಗುತ್ತಿದೆ. ನಾವು ಎರಡನೇ ಅಲೆಯ ಸ್ವರೂಪವನ್ನು ಈ ಹಿಂದೆ ಸ್ಪಷ್ಟವಾಗಿ ಊಹಿಸಿರಲಿಲ್ಲ. ಭವಿಷ್ಯದಲ್ಲಿ ಉತ್ತಮ ಅಂದಾಜು ರೂಪಿಸಲು ಕಾರ್ಯ ನಿರ್ವಹಿಸುತ್ತೇವೆ ಎಂದು ವಿಜ್ಞಾನಿಗಳ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ನಮನ ಅಕಾಡೆಮಿಯಿಂದ 'ನೃತ್ಯಾರ್ಪಣ'




ದಾವಣಗೆರೆ, ಮೇ 2- ನಗರದ ನೃತ್ಯಶಾಲೆ ನಮನ ಅಕಾಡೆಮಿಯಿಂದ ನೃತ್ಯ ದಿನಾಚರಣೆ ಪ್ರಯುಕ್ತ ನೃತ್ಯಾರ್ಪಣ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೊರೊನಾ ನಿಯಮಾವಳಿ ಅನುಸರಿಸಿ ಅಕಾಡೆಮಿಯ ಕಾರ್ಯದರ್ಶಿ ಹಾಗೂ ನೃತ್ಯ ಗುರು ಶ್ರೀಮತಿ ಮಾಧವಿ ಡಿ.ಕೆ. ಅವರ ನೇತೃತ್ವದಲ್ಲಿ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ ಪ್ರೋತ್ಸಾಹದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನಮನ ಅಕಾಡೆಮಿಯ ನಿರ್ದೇಶಕರೂ ಆದ ಪಾಲಿಕೆಯ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಗರ ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳ್, ಅಕಾಡೆಮಿಯ ನಿರ್ದೇಶಕರಾದ ರಾಮನಾಥ್ ಪಿ.ಸಿ., ಅನಿಲ್ ಬಾರೆಂಗಳ್, ಅಧ್ಯಕ್ಷ ಕೆ.ಎನ್. ಗೋಪಾಲಕೃಷ್ಣ ಉಪಸ್ಥಿತರಿದ್ದರು.

ನೃತ್ಯಪಟುಗಳಾದ ಭೂಮಿಕಾ ಎಸ್. ಕಠಾರೆ, ಮನ್ವಿತಾ ಎ.ವಿ., ನೀಲು ಎಸ್. ಅರೋರ್, ಪರಿಣಿಕಾ ಕೆ.ವಿ., ಸಂಜನಾ ಎಸ್., ಕು. ಯಕ್ಷ ಎಸ್. ಕಠಾರೆ, ಚತುರಶ್ರ ಅಲರಿಪು, ಸರಸ್ವತಿ ಭಜನ್, ನವಿಲು ನೃತ್ಯ, ಮಹಾಲಕ್ಷ್ಮಿ ಕೌತ್ವಂ, ತಿಲ್ಲಾನ ನೃತ್ಯರೂಪಕ ಪ್ರದರ್ಶಿಸಿದರು.

ಅಕಾಡೆಮಿಯ ವಿದ್ಯಾರ್ಥಿಗಳಾದ ಕು. ಪ್ರಿಯಾ ತಿಪ್ಪೇಸ್ವಾಮಿ, ಕು. ರೋಷನಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಮಾಧವಿ ಡಿ.ಕೆ. ವಂದಿಸಿದರು.

# ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ - ಬಿಜೆಪಿ ಸಮಬಲ

(1ನೇ ಪುಟದಿಂದ) ಪರಿಣಾಮ ಬೀರುವುದಿಲ್ಲ.

ಕರ್ನಾಟಕದ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಮಂಗಳ ಅಂಗಡಿ ಅವರು 5,240 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಕೇರಳದ ಮಲಪ್ಪುರಂನಲ್ಲಿ ಐ.ಯು.ಎಂ.ಎಲ್.ನ ಅಬ್ದುಲ್‌ಸಮದ್ ಸಮದನಿ ಅವರು ಸಿಪಿಐ (ಎ)ನ ವಿ.ಪಿ. ಸಾನು ವಿರುದ್ಧ 1.14 ಲಕ್ಷ ಮತಗಳಿಂದ ಗೆಲುವು ಸಾಧಿಸಿದ್ದಾರೆ.

ತಿರುಪತಿ ಲೋಕಸಭಾ ಕ್ಷೇತ್ರದಲ್ಲಿ ವೈ.ಎಸ್. ಆರ್. ಕಾಂಗ್ರೆಸ್ ಪಕ್ಷದ ಮದ್ದಿಲ ಗುರುಮೂರ್ತಿ ಅವರು ತೆಲುಗು ದೇಶಂನ ಪನಬಕ ಲಕ್ಷ್ಮಿ ವಿರುದ್ಧ 2.71 ಲಕ್ಷ ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ. ರಾಜಸ್ಥಾನದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಎರಡು ಹಾಗೂ ಬಿಜೆಪಿ ಒಂದರಲ್ಲಿ ಗೆಲುವು ಸಾಧಿಸಿದೆ.

ಕರ್ನಾಟಕದ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗಳು ತಲಾ ಒಂದರಲ್ಲಿ ಗೆದ್ದಿವೆ. ಗುಜರಾತ್‌ನ ಒಂದು ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದೆ.

ಮಹಾರಾಷ್ಟ್ರದ ಪಂಡರಾಪುರ - ಮಂಗಳವೇದ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯು ಎನ್‌ಸಿಪಿಯ ವಿರುದ್ಧ ಗೆಲುವು ದಾಖಲಿಸಿದ್ದಾರೆ. ಉತ್ತರಾಖಂಡದ ಒಂದು ಕ್ಷೇತ್ರದಲ್ಲಿ ಬಿಜೆಪಿ ಗೆಲುವು ದಾಖಲಿಸಿದೆ.

# ದಂಡ ವಿಧಿಸಿದ್ದಕ್ಕೆ ರಸ್ತೆಯಲ್ಲೇ ಕುಳಿತು ಪ್ರತಿಭಟಿಸಿದ ವೃದ್ಧ

ದಾವಣಗೆರೆ, ಮೇ 2- ಜಿಲ್ಲೆಯಾದ್ಯಂತ ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಜನತಾ ಕರ್ಫ್ಯೂ ವಿಧಿಸಿದ್ದರೂ ಸಹ ಸಮಯ ಮೀರಿದರೂ ರಸ್ತೆಯಲ್ಲಿ ಓಡಾಡುತ್ತಿದ್ದ ಕಾರಣ ಪೊಲೀಸರು ತನಗೆ ದಂಡ ವಿಧಿಸಿದ್ದಕ್ಕೆ ವೃದ್ಧನೋರ್ವನು ರಸ್ತೆಯಲ್ಲಿ ಕುಳಿತು ಪ್ರತಿಭಟಿಸಿದ ಘಟನೆ ನಗರದ ರೈಲ್ವೆ ನಿಲ್ದಾಣದ ಬಳಿಯ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ನಡೆದಿದೆ.



ಕಾಯಿಪೇಟೆಯ ಬಸವರಾಜಪ್ಪ ಎಂಬಾತ ದಂಡ ವಿಧಿಸಿದ ಪೊಲೀಸರ ವಿರುದ್ಧ ಪ್ರತಿಭಟನೆಗೆ ಕೂತ ವೃದ್ಧ. ಹೃದಯ ಸಂಬಂಧಿ ಸಮಸ್ಯೆಗೆ ಮಾತ್ರೆ ತರಲು ನಾನು ಹೊರಗೆ ಬಂದಿದ್ದೆ. ಈ ವೇಳೆ ಪೊಲೀಸರು ನಾನು ಅನಗತ್ಯವಾಗಿ ಓಡಾಡುತ್ತಿದ್ದೆ ಎಂದು 500 ರೂ. ದಂಡ ವಿಧಿಸಿದ್ದಾರೆ. ಇದು ಸರಿಯಲ್ಲ ಎಂದು ರಸ್ತೆಯಲ್ಲೇ ಕುಳಿತು ಅಸಮಾಧಾನ ವ್ಯಕ್ತಪಡಿಸಿದರು.

ಪೊಲೀಸರು ಮನೆಗೆ ತೆರಳುವಂತೆ ಸೂಚಿಸಿದರೂ ಸಹ ಕೆಲ ಕಾಲ ಅಲ್ಲಿಯೇ ಕುಳಿತು ಗೊಂದಲ ಸೃಷ್ಟಿಸಿದರು. ನಂತರ ಅವರ ಮನೆಯವರಿಗೆ ಫೋನಾಯಿಸಿ ಕಳುಹಿಸಿ ಕೊಡಲಾಯಿತು.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, ನಗರದ ಹಳೇಪೇಟೆಯಲ್ಲೇ ಬೇಕಾದಷ್ಟು ಔಷಧಿ ಅಂಗಡಿಗಳು ಇವೆ. ಅಲ್ಲಿಯೇ ಎಲ್ಲಾ ತರಹದ ಔಷಧಿಗಳು ಸಿಗುತ್ತವೆ. ಈ ವ್ಯಕ್ತಿ ಸುಮ್ಮನೆ ಓಡಾಡುತ್ತಿದ್ದ ಕಾರಣ ದಂಡ ವಿಧಿಸಲಾಗಿದೆ. ಇದನ್ನು ಪ್ರಶ್ನಿಸಿದ್ದಕ್ಕೆ ರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸುವ ಮೂಲಕ ಹೈಡ್ರಾಮಾ ನಡೆಸಿದ್ದಾರೆ ಎಂದರು.

| ರಂಜಾನ್ | ದಿನಾಂಕ : 03.5.2021 ಇಫ್ತೇಯಾರಿ ಸಮಯ : 6-49 |
|---|---|
| ರೋಜಾ ಸಮಯ | ದಿನಾಂಕ 04.05.2021 ಸಹೇರಿ ಸಮಯ : 4-46 |

# 18 ವರ್ಷ ಮೀರಿದವರ ಲಸಿಕೆಗೆ 122 ಕೋಟಿ ಡೋಸ್ ಬೇಕು : ಕೇಂದ್ರ

ನವದೆಹಲಿ, ಮೇ 2 – ದೇಶದಲ್ಲಿ 18 ರಿಂದ 45 ವರ್ಷಗಳವರೆಗಿನ 59 ಕೋಟಿ ಜನರಿಗೆ ಲಸಿಕೆ ನೀಡಲು, 122 ಕೋಟಿ ಡೋಸ್‌ಗಳ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸುಪ್ರೀಂ ಕೋರ್ಟ್ ಎದುರು ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ, ಅತ್ಯಲ್ಪ ಅವಧಿಯಲ್ಲಿ ಶೇ.100ರಷ್ಟು ಲಸಿಕೆ ಗುರಿ ಸಾಧಿಸುವುದು ನಮ್ಮ ಗುರಿಯಾಗಿದೆ. ಲಭ್ಯವಿರುವ ಸಂಪನ್ಮೂಲ ಹಾಗೂ ಲಸಿಕೆಗಳ ಲಭ್ಯತೆ ಪರಿಗಣಿಸಿ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

ದೇಶದಲ್ಲಿ ಕೊವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್‌ಗಳ ಲಭ್ಯತೆ ಸೀಮಿತವಾಗಿದೆ. ಹೀಗಾಗಿ ಸರ್ಕಾರ ವೈಜ್ಞಾನಿಕವಾಗಿ ಆದ್ಯತೆಯ ಮೇಲೆ ಲಸಿಕೆ ನೀಡುತ್ತಿದೆ. ಮೊದಲ ಆದ್ಯತೆ ಆರೋಗ್ಯ ಕಾರ್ಯಕರ್ತರದ್ದಾಗಿದೆ ಎಂದು ಸರ್ಕಾರ ಹೇಳಿದೆ.

## ಎಲ್.ಎಸ್. ಶಾರದಮ್ಮ ಲಿಂಗೈಕ್ಯ



ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್ ಮೋದಿ ಕಾಂಪೌಂಡ್ ಬಳಿ ವಾಸಿ ಲೇಟ್ ಡಿ.ಎಸ್. ಸೋಮಶೇಖರಯ್ಯ ಅವರ ಧರ್ಮಪತ್ನಿ

**ಎಲ್.ಎಸ್. ಶಾರದಮ್ಮ** (82)

ಅವರು 2.05.2021ರ ಭಾನುವಾರ ಮಧ್ಯಾಹ್ನ 1.30ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪುತ್ರರು, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 2.05.2021ರ ಭಾನುವಾರ ಸಂಜೆ 7.30ಕ್ಕೆ ನೆರವೇರಿಸಲಾಯಿತು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte